ಮನಸಿ

ತಿಂಗಳ ಪತ್ರಿಕೆ ಸೆಪ್ಟೆಂಬರ್ ೧೯೬೦



ಮಾನಸ

ಸಂಪುಟ : ೩ ಸಂಚಿಕೆ : ೯

ಸೆಪ್ಟೆಂಬರ್ ೧೯೯೦

ವಿಳಾಸ "ಮಾನಸ ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ (ಪೊ)

ಬೆಂಗಳೂರು—560067

ಬಿಡಿಪ್ರತಿ :2 ರೂ.

ಸೂಚನೆ : ವಾರ್ಷಿಕ ಚಂದಾ :20ರೂ.

ಆಜೀವ ಚಂದಾ : 250ರೂ.


ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು.

ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.

ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ...........



ಸಂಪಾದಕೀಯ

ಈಗೀಗ ಸ್ತ್ರೀಯರಲ್ಲಿ ಉದ್ಯೋಗ ಕ್ಷೇತ್ರಕ್ಕೆ ಧಾಪುಗಾಲು ಹಾಕಲೆಳಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಆರ್ಥಿಕ ಸ್ವಾತಂತ್ರ್ಯ ಗಂಡಿನಷ್ಟೇ ಹೆಣ್ಣಿಗೂ ಅಗತ್ಯ ಎಂಬ ಅಭಿಪ್ರಾಯದ ಪರಿಣಾಮ. ಆದರೆ ಮಹಿಳೆಯರು ಆರಿಸಿಕೊಳ್ಳುವ ಉದ್ಯೋಗಗಳು ಮಾತ್ರ ಸೀಮಿತ ಚೌಕಟ್ಟಿನಲ್ಲೇ ಇದೆ. ಅದರಿಂದಾಚೆ ಹೋಗಲು ಅವರೇ ಇಷ್ಟಪಡುವುದಿಲ್ಲವೋ ಅಥವಾ ವ್ಯವಸ್ಥೆಯೇ ಆ ರೀತಿ ಇದೆಯೋ ಎಂದು ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ, ಬಹುತೇಕ ಸ್ತ್ರೀಯರು ಆರಿಸಿಕೊಳ್ಳುವುದು ಡಾಕ್ಟರ್, ದಾದಿ, ಟೀಚರ್, ಟೆಲಿಫೋನ್ ಆಪರೇಟರ್‌ಗಳು, ಗುಮಾಸ್ತೆ ಅಥವಾ ಟೈಪಿಸ್ಟ್ ಹುದ್ದೆಗಳನ್ನೇ.

ಹೆಣ್ಣಿಗೆ ಜನ್ಮಸಿದ್ಧ ವರ ಎಂದು ಹೊಗಳಲ್ಪಟ್ಟಿರುವ ಸಹನೆ, ತಾಳ್ಮೆಗಳೇ ಇದಕ್ಕೆ ಕಾರಣ ಎನ್ನಬಹುದು. ದಾದಿ, ಡಾಕ್ಟರ್‌ಗಳ ನಿರ್ವಹಣೆಗೆ ಸೇವಾ ಮನೋಭಾವ, ತಾಳ್ಮೆ ಅಗತ್ಯ, ಶಿಕ್ಷಕಿಯರ ಕೆಲಸಕ್ಕೂ ಸಹನೆ, ಸ್ನೇಹದ ನಂಟು ಬೇಕೇ ಬೇಕು. ಟೈಪಿಸ್ಟ್, ಟೆಲಿಫೋನ್ ಆಪರೇಟರ್‌ಗಳು ಇವುಗಳಿಗೆ "ಕೋಮಲ ಸೌಂದರ್ಯ"ದ ನಾಜೂಕುತನದ ಬೇಡಿಕೆ ಇದೆ ಎಂಬ ಭಾವನೆ ದಟ್ಟವಾಗಿದೆ. ಹಾಗಾಗಿ ಈ ಕ್ಷೇತ್ರಗಳಿಗೆ ಮಹಿಳೆ ಲಾಯಕ್ಕು ಎಂಬ ಧೋರಣೆ. ಪೂರಕ ಘಟಕಗಳಲ್ಲಿ ಬಿಡಿ ಭಾಗಗಳನ್ನು ಸೇರಿಸುವುದಕ್ಕೂ "ಹೆಂಗಸರೇ ಸರಿ" ಎಂದು ಸ್ತ್ರೀಯರನ್ನೇ ಆರಿಸುತ್ತಾರೆ. ಹೀಗಾಗಿ ಹೆಣ್ಣು ಆ ಚೌಕಟ್ಟಿನೊಳಗೇ ಜೀವಿಸಬೇಕು. ಎಂಬುದನ್ನೇ ಗುರಿಯಾಗಿಟ್ಟುಕೊಂಡೇ ಸಿದ್ಧವಾಗುತ್ತಾಳೆ, ಅವಳಿಗೆ ನೀಡುವ ಶಿಕ್ಷಣವೂ ಇದಕ್ಕೆ ಪೂರಕವಾಗಿರುತ್ತದೆ. ಜನ್ಮಸಿದ್ಧವಾಗಿರಬಹುದಾದ ಸಾಹಸ ಮನೋಭಾವ, ಆಸಕ್ತಿ, ಕುತೂಹಲಕ್ಕೂ ಕಡಿವಾಣ ಹಾಕುತ್ತದೆ.

ಕೆಲವು ಮನಃಶಾಸ್ತ್ರಜ್ಞರು ಸ್ತ್ರೀಯರು ಭಾವನಾತ್ಮಕ ಕ್ಷೇತ್ರವಾದ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಹೆಚ್ಚು ಮುಂದುವರೆಯುವರು, ಪುರುಷರು ವಿಜ್ಞಾನ, ಗಣಿತಗಳಂತಹ ಬುದ್ಧಿಶಕ್ತಿ ಅಗತ್ಯತೆಯ ಕ್ಷೇತ್ರದಲ್ಲಿ ಸ್ವಾಮಿತ್ವ ಹೊಂದುತ್ತಾರೆ" ಎನ್ನುತ್ತಾರೆ. ಇದಕ್ಕೆ ಮೆದುಳಿನ ಬೆಳವಣಿಗೆಯ ಕಾರಣವನ್ನೂ ನೀಡುತ್ತಾರೆ. ಆದರೆ, ಮಗನಿಗೆ ಬಾಲ್ಯದಿಂದಲೂ ನೀಡಿದ ಶಿಕ್ಷಣ, ತರಬೇತಿ ಮಗಳಿಗೂ ನೀಡಲು ಹೆಚ್ಚಿನ ತಾಯ್ತಂದೆಯರು ಮನಸ್ಸು ಮಾಡುವುದಿಲ್ಲ. ಸಮಾಜವೂ ಈ ದಿಸೆಯಲ್ಲಿ ಆಸಕ್ತವಾಗಿರುವುದಿಲ್ಲ. ಬೆಳೆದ ಮೇಲೂ ಸಹ, ತಾಂತ್ರಿಕ ಕ್ಷೇತ್ರವು ಹೆಚ್ಚಾಗಿ ಬೇಡುವ "ಸಮಯ" ಅವಳಿಗೆ ದಕ್ಕುವುದಿಲ್ಲ. ಕಾರಣ ಅವಳನ್ನು "ಮನೆ"ಯ ಸಂಬಂಧಗಳು ಅಷ್ಟು ಸುಲಭವಾಗಿ ಬಿಟ್ಟುಕೊಡಲೊಪ್ಪದು. ಎಷ್ಟೇ ಬುದ್ಧಿಶಕ್ತಿಯಿದ್ದರೂ, ಸಂಶೋಧನೆಗೆ ತನ್ನ ಹೊಸ ಆಲೋಚನೆಗಳಿಗೆ ಹೊಸ ರೂಪ ಕೊಡಲು ಅಡಿಪಾಯವಾಗುವಂಥ ಉತ್ತಮ ಶಿಕ್ಷಣದ ಅಗತ್ಯವೂ ಅವಳಿಗಿದೆ ಹಾಗೂ ಆ ದಿಸೆಯಲ್ಲಿ ಅವಳ ಪ್ರಗತಿಗೆ ಪರಿಸರವೂ ಪೂರಕವಾಗಿರಬೇಕು;

ಜಪಾನಿನ ಉದ್ಯಮ ರಂಗದಲ್ಲಿ ಮಹಿಳೆ

ಮೂಲ ; ಸ್ಯಾಲಿ ಸೋಲೋ
ಅನುವಾದ : ಮಂದಾಕಿನಿ

ಜಪಾನಿನಲ್ಲಿ ಈವರೆಗೆ ಪುರುಷರ ಪ್ರಪಂಚವಾಗಿದ್ದ ಕಾರ್ಪೊರೇಟ್ ಜಗತ್ತನ್ನು ಮಹಿಳೆಯರು ನಿಧಾನವಾಗಿ ಪ್ರವೇಶಿಸುತ್ತಿದ್ದಾರೆ.

ಈ ೧೫ ವರ್ಷಗಳ ಕಾಲದಲ್ಲಿ ಮಹಿಳೆಯರು ಜಪಾನಿ ಉದ್ಯೋಗ ಮಾರುಕಟ್ಟೆಯನ್ನು ಪುರುಷರಿಗಿಂತ ತ್ವರಿತಗತಿಯಲ್ಲಿ ಪ್ರವೇಶಿಸುತ್ತಿದ್ದಾರೆ. ೧೯೮೮ರಲ್ಲಿ ಇಡೀ ಕಾರ್ಮಿಕ ಶಕ್ತಿಯ ಶೇ. ೪೦ಕ್ಕೂ ಹೆಚ್ಚು ಪಾಲು ಮಹಿಳೆಯರದ್ದಾಗಿತ್ತು. ಈ ಉದ್ಯೋಗಸ್ಥ ಮಹಿಳೆಯರೆಲ್ಲ ಸರಿಯಾದ ಪುರುಷನಿಗಾಗಿ ಕಾಯುತ್ತಾ ಕುಳಿತ ಏಕಾಕಿ ಮಹಿಳೆಯರೂ ಅಲ್ಲ; ಸುಮಾರು ಮೂರನೇ ಎರಡರಷ್ಟು ಮಹಿಳೆಯರು ವಿವಾಹಿತರು. ಬಹುಪಾಲು ಮಹಿಳೆಯರು ಬ್ಯಾಂಕ್ ಉದ್ಯೋಗಿಗಳು ಹಾಗೂ ಡಿಪಾರ್ಟ್‌ಮೆಂಟ್ ಸ್ಟೋರ್ಸ್ ಸಹಾಯಕರಾಗಿದ್ದರೂ ಸಮಿತಿಗಳ ಸಮ್ಮೇಳನ ನಡೆಯುವ ಕೊಠಡಿಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳಲಾರಂಭಿಸಿದ್ದಾರೆ. ಸ್ವತಂತ್ರವಾಗಿ ಆಡಳಿತ ನಿರ್ವಹಿಸುವಂತಹ ಮ್ಯಾನೇಜೇರಿಯಲ್ ಹುದ್ದೆಗಳಲ್ಲಿರುವ ಮಹಿಳೆಯರ ಸಂಖ್ಯೆ ೧೯೭೬ ಮತ್ತು ೧೯೮೬ ನಡುವಿನಲ್ಲಿ ಶೇಕಡಾ ೫೦ರಷ್ಟು ಹೆಚ್ಚಿದೆ.

ಅನೇಕ ವರ್ಷಗಳಿಂದ ಜಪಾನಿ ಕಂಪೆನಿಗಳು ೨ ಮಾರ್ಗಗಳಲ್ಲಿ ಹೊಸ ಉದ್ಯೋಗಿಗಳನ್ನು ನೇಮಕಮಾಡಿಕೊಳ್ಳುತ್ತಿತ್ತು. ಇದರಲ್ಲಿ ಉದ್ಯೋಗಿಯ ಶಿಕ್ಷಣವನ್ನು ಗಣನೆಗೇ ತೆಗೆದುಕೊಳ್ಳುತ್ತಿರಲಿಲ್ಲ. ಒಂದು– ಆಡಳಿತ ನಿರ್ವಹಣೆಯ ಕೆಲಸ. ಇದು ಪುರುಷರಿಗೇ ಯಾವಾಗಲೂ ಮೀಸಲಾದದ್ದು. ಮತ್ತೊಂದು ಗುಮಾಸ್ತೆ ಹುದ್ದೆಯಿಂದ ಆರಂಭವಾಗಿ ಗುಮಾಸ್ತೆ ಹುದ್ದೆಯಲ್ಲೇ ಅಂತ್ಯವಾಗುವಂತಹದ್ದು ಹಾಗೂ ಟೀ ಸಪ್ಲೈ ಕೆಲಸ–ಈ ಎರಡನೆಯ ಕೆಲಸ ಯಾರಿಗೆ ಎಂಬುದನ್ನು ಊಹಿಸಿ. ಈಗ ಮೊದಲ ಬಾರಿಗೆ ಕಾಲೇಜು ಶಿಕ್ಷಣ ಪಡೆದ ಅನೇಕ ಮಹಿಳೆಯರು ಮ್ಯಾನೇಜ್‌ಮೆಂಟ್ ಹುದ್ದೆಗಳಿಗೆ ನೇಮಕಗೊಳ್ಳುತ್ತಿದ್ದಾರೆ. ಜಪಾನಿನ ಹಲವಾರು ದೊಡ್ಡ ಕಂಪನಿಗಳಲ್ಲಿ ಸೇವಾ ಹಿರಿತನವನ್ನು ಈಗಲೂ ಪರಿಗಣಿಸುವುದರಿಂದ ೧೯೯೦ರ ದಶಕ ಮತ್ತು ನಂತರದ ಅವಧಿಯಲ್ಲಿ ಅನೇಕ ಮಹಿಳಾ ಮ್ಯಾನೇಜರ್‌ಗಳು ಇರುವುದು ಖಚಿತ.

ಈ ಕ್ರಾಂತಿಗೆ ಯಾವುದೇ ಸಿದ್ಧಾಂತ ಮೂಲ ಕಾರಣವಲ್ಲ. ಆರ್ಥಿಕ ಅಗತ್ಯ ಮುಖ್ಯ ಕಾರಣ. ಕಳೆದ ಒಂದು ವರ್ಷದಲ್ಲಿ ವಿಸ್ತೃತಗೊಳ್ಳುತ್ತಿರುವ ಜಪಾನಿ ಆರ್ಥವ್ಯವಸ್ಥೆಯಲ್ಲಿ ಕಾರ್ಮಿಕ ಶಕ್ತಿಗಾಗಿ ಬೇಡಿಕೆ ಹೆಚ್ಚಿದೆ. ಆರ್ಥಿಕ ಯೋಜನಾ ಸಚಿವಾಲಯದ ಮಾಜಿ ಹಿರಿಯ ಅಧಿಕಾರಿ ಹಜಿಮು ಹೊರಿ ಅವರ ಪ್ರಕಾರ, ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ 'ಉನ್ನತ ತಂತ್ರಜ್ಞಾನದ (ಹೈಟೆಕ್) ವಲಯದಲ್ಲಿ ಈ ಕೊರತೆ ತೀಕ್ಷ್ಣವಾಗಿದೆ. ಮಹಿಳಾ ಶಕ್ತಿಯನ್ನು ಹೇಗೆ ತರಬೇತುಗೊಳಿಸಿ ಬಳಸಿಕೊಳ್ಳಬೇಕು ಎಂಬುದು ಕಂಪನಿಗಳಿಗೆ ಒಂದು ದೊಡ್ಡ ಸವಾಲಾಗಿದೆ ಎಂದು ಅವರು ವಿವರಿಸುತ್ತಾರೆ.

ಸುಮಾರು ಶೇಕಡಾ ೯೫ರಷ್ಟು ಜಪಾನೀ ಮಹಿಳೆಯರು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದ್ದಾರೆ ಹಾಗೂ ಶೇಕಡಾ ೩೬ರಷ್ಟು ಮಹಿಳೆಯರು ಜ್ಯೂನಿಯರ್ ಕಾಲೇಜು ಅಥವಾ ನಾಲ್ಕು ವರ್ಷದ ಕಾಲೇಜು ಪದವಿಯ ಶಿಕ್ಷಣ ಮುಗಿಸಿದ್ದಾರೆ. "ಹಿಂದೆ ಕಂಪನಿಗಳು ಕೆಲಸದ ಅವಧಿ ಮುಗಿದ ಕೂಡಲೇ ಮನೆಗೆ ಹಿಂತಿರುಗಲು ಬಯಸುತ್ತಿದ್ದ ಶೇಕಡಾ ೮೦ರಷ್ಟು ಮಹಿಳೆಯರನ್ನು ಮತ್ತು ಅದೇ ಕೆಲಸವನ್ನು ಪುರುಷರಂತೆ ನಿರ್ವಹಿಸಲು ಬಯಸುತ್ತಿದ್ದ ಶೇಕಡಾ ೩೦ರಷ್ಟು ಮಂದಿ ಮಹಿಳೆಯರನ್ನು ಒಂದೇ ರೀತಿಯಲ್ಲಿ ಕಾಣುತ್ತಿದ್ದವು" ಎಂದು ಜಪಾನಿನ ೪೦೦ ಮಹಿಳಾ ಎಕ್ಸಿಕ್ಯೂಟಿವ್‌ಗಳ ಸಂಘದ ಅಧ್ಯಕ್ಷೆ ನೋರಿಕೊ ನಕಾಮುರಾ ಹೇಳುತ್ತಾರೆ. ಇದರ ಪರಿಣಾಮವಾಗಿ

ಮ್ಯಾನೇಜೀರಿಯಲ್ ಕೆಲಸಗಳಲ್ಲಿ ಯಾವುದೇ ಮಹಿಳೆಯರನ್ನು ನೇಮಿಸಲು ಹಿಂಜರಿಯಲಾಯಿತು.

ಯಾವ ಮಹಿಳೆ ಪುರುಷನಂತೆ ಕೆಲಸ ಮಾಡಲು ಇಚ್ಛಿಸುತ್ತಾಳೆ ಎಂಬುದನ್ನು ಕಂಡುಕೊಳ್ಳಲು ಚಿಕ್ಕ ಸಂದರ್ಶನ ಸಹಾಯಮಾಡುತ್ತದೆ ಎಂಬುದು ಈಗ ಪರ್ಸೊನೆಲ್ ಮ್ಯಾನೇಜರ್‌ಗಳಿಗೆ ಅರಿವಾಗಿದೆ. ಆದರೂ ಬದಲಾವಣೆಯಾಗದ ಸಂಪ್ರದಾಯ ಮನೋಭಾವದ ಪುರುಷರು ಇನ್ನೂ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ನಕಾಮುರಾ ಹೇಳುತ್ತಾರೆ. "ಈ ಮಹಿಳೆಯರು ಕೆಲಸದಲ್ಲಿ ಅಂಗೀಕೃತವಾಗಲು ಕಿರಿಕಿರಿಯನ್ನು ಸೃಷ್ಟಿಸದಿರಲು ಯತ್ನಿಸಬೇಕು" ಎಂದೂ ಅವರು ಹೇಳುತ್ತಾರೆ.

ವೃತ್ತಿಪರವಾಗಿರುವ ಮಹಿಳೆಯರಿಗೆ ಅಧಿಕಾರಶಾಹಿ, ವಿದೇಶಿ ಸಂಸ್ಥೆಗಳಿಗೆ ಸೇರಿಕೊಳ್ಳುವುದು ಅಥವ ಉದ್ಯಮವನ್ನು ಸ್ಥಾಪಿಸುವ ಆಯ್ಕೆ ಮಾತ್ರ ಇತ್ತು. ಜಪಾನಿನ ಬೃಹತ್ ಕಂಪನಿಗಳಿಗೆ ಕೆಲಸಮಾಡುವ ಅವಕಾಶ ತೀರಾ ಕಡಿಮೆ ಇತ್ತು. ೧೯೭೦ರಲ್ಲಿ ಕ್ಯಾಲಿಫೋರ್ನಿಯಾದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯದಿಂದ ಮಾನವ ಶಾಸ್ತ್ರದಲ್ಲಿ ಪದವಿ ಪಡೆದು, ಮಾರಿಕೊ ಫುಜಿವಾರ ಹಿಂತಿರುಗಿದಾಗ ಸೆಕ್ರೆಟರಿಯಲ್ ಕೋರ್ಸನ್ನು ತೆಗೆದುಕೊಳ್ಳುವಂತೆ ಉದ್ಯೋಗ ಸಂಸ್ಥೆಗಳು ಅವಳಿಗೆ ಸಲಹೆ ಮಾಡಿದವು. ಆದರೆ ಅವಳು ಅದನ್ನು ಕಡೆಗಣಿಸಿ, ಹಾಕುಹೊಡೊ ಜಾಹಿರಾತು ಸಂಸ್ಥೆಯ ಸಂಶೋಧನಾ ಶಾಖೆಯಲ್ಲಿ (ಬದುಕು ಮತ್ತು ಬದುಕುವುದು) ಕೆಲಸ ಪಡೆಯುವಲ್ಲಿ ಯಶಸ್ವಿಯಾದಳು.

ಯಾವುದೇ ಕೋಪವಿಲ್ಲದೆ ಆ ಕಾಲವನ್ನು ಅವರು ನೆನೆಯುತ್ತಾರೆ. ಜಪಾನಿ ಕಂಪನಿಗಳು ಹೊಸದಾಗಿ ಕಾಲೇಜಿನಿಂದ ಹೊರ ಬಂದವರನ್ನು ಉದ್ಯೋಗಿಗಳಾಗಿ ನೇಮಿಸಿಕೊಂಡು ನಂತರ ಸಂಸ್ಥೆಯೊಂದಿಗಿನ ಜೀವನ ಪರ್ಯಂತದ ವೃತ್ತಿಗಾಗಿ ತರಬೇತಿ ನೀಡುತ್ತಿದ್ದವು. ಮದುವೆಯಾಗಿ ಕೆಲ ವರ್ಷಗಳಲ್ಲೇ ಕೆಲಸ ಬಿಡುವಂತಹ ಮಹಿಳೆಯರಿಗೆ ತರಬೇತಿಗಾಗಿ ಹೂಡುವ ಬಂಡವಾಳದ ಹಣ ಲಾಭದಾಯಕವಲ್ಲ ಎಂಬ ಅಭಿಪ್ರಾಯ ಪ್ರಚಲಿತವಿತ್ತು. "ನಾವು ನಡೆದು ಬಂದ ಹಾದಿ ಅಷ್ಟೇನೂ ಹಿತಕರವಾಗಿರಲಿಲ್ಲ. ವಿಶಿಷ್ಟ ಮಹಿಳೆಯರು ಇರಬಹುದು ಎಂಬ ಕಲ್ಪನೆಯೇ ಪುರುಷರಿಗೆ ಇರಲಿಲ್ಲ." ಎನ್ನುತ್ತಾರೆ ಫುಜಿವಾರ.

ಆದರೆ ಅಪರೂಪದ ಮಹಿಳೆ ವೃತ್ತಿ ಜೀವನಕ್ಕೆ ಕಾಲಿರಿಸಿದಾಗ ಆಕೆಯ ಬಗ್ಗೆ ತೀವ್ರವಾದ ಪೂರ್ವಾಗ್ರಹ ಧೋರಣೆಗಳು ಇರುತ್ತಿದ್ದವು. ಟೋಕಿಯೋದ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ ಮಿವಾಕೊ ಡಾಯ್ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿ ಸೇರಲು ಬಹಳ ಪ್ರಯತ್ನಪಟ್ಟರು. ಕಡೆಗೆ ಅವರು ಇಂಜಿನಿಯರ್ ಆಗಿ ಕೆಲಸ ಶುರು ಮಾಡಿದಾಗ, "ಏನು ಮಹಿಳೆಯೊಬ್ಬಳು ಇಲ್ಲಿ!" — ಎಂದು ಹೇಳುತ್ತಿದ್ದುದ್ದನ್ನು ಅವರು ಸ್ಮರಿಸುತ್ತಾರೆ. ಆದರೂ ಧೃತಿಗೆಡದೆ ವೃತ್ತಿ ಜೀವನದಲ್ಲಿ ಮುಂದುವರೆದ ಆಕೆ ಕಡೆಗೆ ಮ್ಯಾನೇಜರ್ ಆದರು.

ಉದ್ಯಮವನ್ನು ಪಾರಂಪರಿಕವಾಗಿ ಎಚ್ಚರದಿಂದ ನೋಡಿಕೊಳ್ಳುತ್ತಿರುವ ಪುರುಷರು ಮತ್ತು ಪುರುಷರ ಹಿತವನ್ನು ಕಾಯ್ದುಕೊಂಡು ಬಂದಿರುವ ಕಛೇರಿ ಮಹಿಳೆಯರ ಮಧ್ಯೆ ಇಂದು ಕೆಲವು ಮಹಿಳೆಯರು ತಮ್ಮನ್ನು ಕಂಡುಕೊಂಡಿದ್ದಾರೆ. "ನಿಕ್ಕೊ ಸೆಕ್ಯೂರಿಟೀಸ್" ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಯುಕಾರಿ ಯಮಗುಚಿಯ ಆಶಯಗಳು ವಾಸ್ತವದ ನೆಲೆಗಟ್ಟಿನಲ್ಲಿರುವಂಥದ್ದು. "ಮಹಿಳೆ ಸುಲಭವಾಗಿ ಟೀಕೆಗಳಿಗೆ ಗುರಿಯಾಗುವಂಥವಳು. ಅವಳಿಗೆ ಯಾವುದಾದರೂ ವಿದ್ಯಾರ್ಹತೆ ಇರುವುದು ಅಗತ್ಯ. ಟೋಕಿಯೋ ವಿಶ್ವವಿದ್ಯಾನಿಲಯದ ಪದವಿ ಒಳ್ಳೆಯ ರಕ್ಷಣೆ ಒದಗಿಸುವಂತದ್ದು" ಎಂದು ಅವರು ಹೇಳುತ್ತಾರೆ. ಯಮಾಗುಚಿ ಅವರು ೧೯೮೯ರ ಸೆಪ್ಟೆಂಬರ್ ತಿಂಗಳಲ್ಲಿ ಹಾರ್ವರ್ಡ್ ಉದ್ಯಮ ಶಾಲೆಯ ಪ್ರವೇಶ ಪಡೆದ ನಿಕ್ಕೊ ಸಂಸ್ಥೆಯ ಪ್ರಥಮ ಮಹಿಳೆಯಾಗಿದ್ದಾರೆ. "ನನ್ನ ಎಂ.ಬಿ.ಎ. ಪದವಿಯೂ ನನಗೆ ಉದ್ಯೋಗದಲ್ಲಿ ಒಳ್ಳೆಯ ರಕ್ಷಣೆ ಒದಗಿಸುತ್ತಿದೆ" ಎಂದು ಅವರು ಪ್ರತಿಪಾದಿಸುತ್ತಾರೆ.

೧೯೭೦ರ ದಶಕದಲ್ಲಿನ ಅಮೇರಿಕಾ ಮಹಿಳೆಯರಂತೆ ಜಪಾನೀ ಮಹಿಳೆಯರು ಸಮಾನ ಉದ್ಯೋ

೧೯೭೦ರ ದಶಕದಲ್ಲಿನ ಅಮೇರಿಕಾ ಮಹಿಳೆಯರಂತೆ ಜಪಾನೀ ಮಹಿಳೆಯರು ಸಮಾನ ಉದ್ಯೋಗದ ಹೋರಾಟಕ್ಕಾಗಿ ಗುಂಪುಗೂಡಲಿಲ್ಲ. ಇದಕ್ಕೆ ಮುಖ್ಯ ಕಾರಣ ಜಪಾನಿ ಪುರುಷರ ಬದುಕಿನ ಬಗ್ಗೆ ಅಸೂಯೆ ಪಡುವಂತದ್ದು ಏನೂ ಇರಲಿಲ್ಲ. ಒಬ್ಬ ಸಾಮಾನ್ಯ ವೈಟ್ ಕಾಲರ್ ಪುರುಷ ಉದ್ಯೋಗಿ ಸಂಜೆಯವರೆಗೆ ನಿಯತವಾಗಿ ಕೆಲಸ ಮಾಡುತ್ತಾನೆ, ಟೋಕಿಯೋದಲ್ಲಿನ ಕಛೇರಿಯಿಂದ ಆತ ತನ್ನ ಮನೆ ತಲುಪಲು ಒಂದೂವರೆ ಗಂಟೆಗಳ ಕಾಲ ಪ್ರಯಾಣಿಸುತ್ತಾನೆ. ವರ್ಷಕ್ಕೆ ಆತ ಕೇವಲ ಒಂದು ವಾರದ ರಜೆಯನ್ನು ಮಾತ್ರ ತೆಗೆದುಕೊಳ್ಳುತ್ತಾನೆ.

ಆದ್ದರಿಂದ ಉದ್ಯೋಗಸ್ಥ ಮಹಿಳೆಯರಲ್ಲಿ ಮೂರನೇ ಒಂದು ಭಾಗದಷ್ಟು ಮಹಿಳೆಯರು ತಾತ್ಕಾಲಿಕ ಉದ್ಯೋಗಗಳಿಗೆ ಸೇರಿಕೊಳ್ಳುತ್ತಾರೆ. "ತಮ್ಮ ವೈವಾಹಿಕ ಜೀವನಕ್ಕೆ ಹಾಗೂ ತಮ್ಮ ಮಕ್ಕಳ ಪೋಷಣೆಗೆ ಅಡ್ಡಿಯುಂಟು ಮಾಡದ ಉದ್ಯೋಗವನ್ನು ಮಹಿಳೆಯರು ಬಯಸುತ್ತಾರೆ" ಎಂದು ಒಕಾನೊಮಿಜು ಮಹಿಳಾ ಕಾಲೇಜಿನ ಅರ್ಥಶಾಸ್ತ್ರದ ಅಸೋಸಿಯೇಟ್ ಪ್ರೊಫೆಸರ್ ಇಕೊ ಶಿನೋಟ್ಸುಕ ಹೇಳುತ್ತಾರೆ, "ಕಂಪನಿಗಳು ಬಯಸುವಂತೆ ದಿನದಲ್ಲಿ ೧೨ ಗಂಟೆಗಳ ಕಾಲವನ್ನು ಪೂರ್ಣವಾಗಿ ವಿನಿಯೋಗಿಸಲು ಈ ಮಹಿಳೆಯರಿಗೆ ಸಾಧ್ಯವಿಲ್ಲ".

ಜಪಾನಿನ ೨ನೇ ಮಹಾಯುದ್ಧದ ನಂತರದ ಸಂವಿಧಾನದಲ್ಲಿ ಸಮಾನಾವಕಾಶದ ಪರಿಚ್ಛೇದವನ್ನು ಸೇರಿಸಲಾಯಿತು. ಆದರೆ ಇದಕ್ಕೆ ಬೆಂಬಲವಾಗಿ ಯಾವುದೇ ಶಾಸನವನು ಬೆಂಬಲವಾಗಿ ರೂಪಿಸಲಿಲ್ಲ. ಹೀಗಾಗಿ ಈ ತತ್ವ ರಾಷ್ಟ್ರದ ಪುನರ್‌ನಿರ್ಮಾಣದ ಯತ್ನದಲ್ಲಿ ಹೆಚ್ಚು ಪ್ರಚಲಿತವಾಗಲಿಲ್ಲ. ೧೯೭೫ರಿಂದ ೧೯೮೫ರ ವಿಶ್ವಸಂಸ್ಥೆ ಮಹಿಳಾ ದಶಕದ ಆಚರಣೆ ಬದಲಾವಣೆಗೆ ಪ್ರಚೋದನೆಯಾಗಿತ್ತು. ೧೯೮೫ರಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳು ಮಹಿಳೆಯರ ವಿರುದ್ಧ ತಾರತಮ್ಯ ಧೋರಣೆ ವಿನಾಶ ಕರಾರಿಗೆ ಸಹಿ ಹಾಕಬೇಕಿತ್ತು. ರಾಜಕೀಯವಾಗಿ ಜಪಾನ್ ಸಹಿ ಮಾಡಲೇಬೇಕಿತ್ತು. ಕರಾರನ್ನು ಪುಷ್ಟೀಕರಿಸಲು ಕೆಲ ರೀತಿಯ ಸ್ವದೇಶಿ ಕಾನೂನನ್ನು ಮಾಡದೆ ಜಪಾನ್ ಹಾಗೆ ಮಾಡುವುದು ಅಸಾಧ್ಯವಾಗಿತ್ತು. ಕಾರ್ಪೋರೇಷನ್‌ಗಳು ಇದರ ವಿರುದ್ಧ ತೀವ್ರವಾಗಿ ಲಾಬಿ ನಡೆಸಿದವು. ಆದರೆ ಶಾಸನವು ಕಡೆಗೆ ೧೯೮೬ರ ಏಪ್ರಿಲ್‌ನಲ್ಲಿ ಜಾರಿಗೆ ಬಂದಿತು. ಈ ಕಾನೂನಿನಲ್ಲಿ ಯಾವುದೇ ರೀತಿಯ ಜುಲ್ಮಾನೆಗೆ ಅವಕಾಶವಿರಲಿಲ್ಲ.

ಇದೊಂದು ಪ್ರಮುಖ ಬೆಳವಣಿಗೆಯಾಗಿತ್ತು. "ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದನ್ನು ಕಂಪನಿಗಳು ನಿಲ್ಲಿಸಿವೆ." ಎನ್ನುತ್ತಾರೆ, ಕಾರ್ಮಿಕ ಸಚಿವಾಲಯದ ಮಹಿಳೆ ಮತ್ತು ಯುವ ಬ್ಯೂರೋದ ನಿರ್ದೇಶಕಿ ಹಾಗೂ ಶಾಸನ ರಚನೆಯ ಮುಖ್ಯಶಿಲ್ಪಿ ರುಯಾಕೋ ಅಕಮಸ್ತು. ಈ ಶಾಸನವನ್ನು ಕಾರ್ಯಗತಗೊಳಿಸಲು ಸಚಿವಾಲಯ ಪ್ರಶ್ನಾವಳಿಯನ್ನು ವಿತರಿಸುತ್ತದೆ. ಉದಾ: ಇದರಲ್ಲಿ ಕಂಪನಿಗಳು, ಪುರುಷರಿಗೆ ನೀಡಿದ ನೀಡಿದ ತರಬೇತಿಯನ್ನು ಮಹಿಳೆಯರಿಗೂ ನೀಡುತ್ತಿದ್ದಾರೆಯೇ ಅಥವಾ ಅವುಗಳು ಪುರುಷರಷ್ಟೇ ವಯೋಮಿತಿಯ ಮಹಿಳೆಯರನ್ನೇ ಉದ್ಯೋಗಕ್ಕೆ ಸೇರಿಸಿಕೊಳ್ಳುತ್ತವೆಯೇ ಎಂಬ ಪ್ರಶ್ನೆಗಳನ್ನು ಕೇಳಲಾಗಿರುತ್ತದೆ. "ಇದೊಂದು ಮಾರ್ಗದರ್ಶಿ ಸೂತ್ರ. ಇದು ಕಂಪನಿಯ ಉದ್ದೇಶ, ಗುರಿಗಳನ್ನು ಸ್ಥಾಪಿಸುವಲ್ಲಿ ನೆರವಾಗುತ್ತದೆ." ಎನ್ನುತ್ತಾರೆ ಮಹಿಳಾ ಬ್ಯೂರೋದ ಹಾಜಿ ಯೋಜನಾ ನಿರ್ವಾಹಕಿ ಮಾರಿ ವಾಟ್‌ನೊಬೆ.

ಮಹಿಳೆಯರು ಹೊಸ ದೃಷ್ಟಿಕೋನವನ್ನು ಒದಗಿಸಬಲ್ಲರೆಂಬುದನ್ನು ಈಗ ಜಪಾನಿನ ಕೆಲವು ಕಂಪನಿಗಳು ಕಂಡುಕೊಂಡಿವೆ. ಜಪಾನಿನ ಅತಿದೊಡ್ಡ ಜಾಹಿರಾತು ಸಂಸ್ಥೆಯಾದ "ಡೆನ್‌ಟ್ಸು ಐ" ೧೯೮೪ರಲ್ಲಿ ಮಹಿಳಾ ಉಪಘಟಕವನ್ನು ಆರಂಭಿಸಿತು. ಇದರ ಕಛೇರಿಗಳು ಟೋಕಿಯೋದಲ್ಲಿನ ಷಾಪಿಂಗ್ ಡಿಸ್ಟ್ರಿಕ್ಟ್‌ನಲ್ಲಿದೆ. ಇಲ್ಲಿರುವ ೩೦ ಸಿಬ್ಬಂದಿಗಳು ಬಳಕೆದಾರ ಪ್ರವೃತ್ತಿಯನ್ನು ಗಮನಿಸುತ್ತಾರೆ. ಹೀಗಾಗಿ ಇದಕ್ಕೆ "ಡೆನ್‌ಟ್ಸು ಐ" ಎಂದು ಹೆಸರು.

ಇದು ಹೊಸ ಬದುಕಿನ ಪ್ರವೃತ್ತಿಗಳಿಗೆ ಸೂಕ್ಷ್ಮವಾಗಿ ಸ್ಪಂದಿಸುವುದರಿಂದ "ಡೆನ್‌ಟ್ಸು ಐ" ೧೯೮೭

ಅಲ್ಲಿ ಹಿಟಾಚಿ ವಾಷಿಂಗ್ ಮೆಷಿನ್ ಪ್ರಚಾರದಲ್ಲಿ ಬಹಳ ಜನಪ್ರಿಯವಾಯಿತು. ಈ ಮೆಷಿನ್‌ನಲ್ಲಿ ಅನೇಕ ಹೊಸ ಅಂಶಗಳಿದ್ದರೂ ಸದ್ದಿಲ್ಲದೆ ಬಗೆಯುವ ಕಾರ್ಯ ನಿರ್ವಹಿಸುವ ಅಂಶದ ಬಗ್ಗೆ ಪ್ರಚಾರವನ್ನು ಕೇಂದ್ರೀಕರಿಸಲು ನಿರ್ಧರಿಸಲಾಯಿತು. ಈ ಉಪಘಟಕದ ಅಧ್ಯಕ್ಷರಾದ ನಯೊ ವಾಕಿಬಾ ಹೀಗೆ ವಿವರಿಸುತ್ತಾರೆ "ಬಹಳಷ್ಟು ಉದ್ಯೋಗಸ್ಥ ಮಹಿಳೆಯರು ಬಟ್ಟೆ ಒಗೆಯುವ ಕೆಲಸವನ್ನು ರಾತ್ರಿ ವೇಳೆ ಮಾಡಬೇಕಾಗುತ್ತದೆ. ಟೋಕಿಯೋದಲ್ಲಿ ಮನೆಗಳು ಒಂದಕ್ಕೊಂದು ತುಂಬಾ ಸಮೀಪದಲ್ಲಿವೆ." ಅಕ್ಕ-ಪಕ್ಕದ ಮನೆಯವರಿಗೆ ಶಬ್ದದಿಂದ ಎಚ್ಚರವಾಗದಂತೆ ಕಾರ್ಯನಿರ್ವಹಿಸುವ ಮೆಷಿನ್‌ನ ಗುಣ ಈ ಮಹಿಳೆಯರಿಗೆ ಮೆಚ್ಚುಗೆಯಾಯಿತು. ಈಗ "ಹಿಟಾಚಿ" ವಾಷಿಂಗ್ ಮಿಷನ್ ಜಗತ್ತಿನಲ್ಲಿ ಮೊದಲ ಸ್ಥಾನದತ್ತ ದಾಪುಗಾಲು ಹಾಕುತ್ತಿದೆ.

ನಿಸ್ಸಾನ್ ಮೋಟಾರ್ ಕಂಪನಿ, ತನ್ನಲ್ಲಿರುವ ಮಹಿಳಾ ವಿನ್ಯಾಸಕಾರರ ತಂಡ ರೂಪಿಸಿದ ಹೊಸ ವಿಚಾರಗಳಿಂದ ಇತ್ತೀಚೆಗೆ ಯಶಸ್ಸನ್ನು ಸಾಧಿಸಿದೆ. ಈ ಕಂಪನಿ ಮಾಮೂಲಾದ ವಾಹನಗಳಿಗಿಂತ ರೋಮಾಂಚಕಾರಿಯಾದ ವಿಶಿಷ್ಟ ವಾಹನ ತಯಾರಿಸುವ ಗುರಿ ಹೊಂದಿದ್ದು, ಈ ಕಂಪನಿಗೆ, ೧೧,೫೦೦ ಡಾಲರ್ ಬೆಲೆ ಬಾಳುವ ಮಿನಿವ್ಯಾನ್ ಮಾದರಿಯ ಎಸ್-ಕಾರ್ಗೋ ವಾಹನದ ವಿನ್ಯಾಸವನ್ನು ಹ್ಯೂಮಿ ಹಾಂಡಾ ರೂಪಿಸಿದ್ದಾರೆ. ಈ ವಾಹನ ಮಾರುಕಟ್ಟೆಗೆ ಬಿಡುಗಡೆಯಾದ ಮೊದಲ ನಾಲ್ಕು ತಿಂಗಳಲ್ಲೇ ವ್ಯಾಪಾರಿಗಳು ೮,೦೦೦ ವ್ಯಾನುಗಳನ್ನು ಕೊಳ್ಳಲು ಮುಂದಾದರು. ಸಿಲ್ವಿಯ ಎಂಬ ಸ್ಪೋರ್ಟ್ಸ್ ಕಾರಿಗೆ ನಿಂಬೆ-ಹಸಿರು ಬಣ್ಣ ಹಾಕಲು ಕಂಪನಿಯ ಮತ್ತೊಬ್ಬ ವಿನ್ಯಾಸಕಿ ಕಜುಕೊ ವಟನಬೆ ನಿರ್ಧರಿಸಿದರು. ಇತ್ತೀಚಿನವರೆಗೆ ಬಿಳಿ ಬಣ್ಣವು, ಕಾರು ಕೊಳ್ಳುವ ಜಪಾನೀಯರು ಬಯಸುತ್ತಿದ್ದ ಬಣ್ಣಗಳನ್ನು ಇಷ್ಟಪಡುತ್ತಿದ್ದಾರೆ. ಈ ಹೊಸ ಪ್ರವೃತ್ತಿ ಸೃಷ್ಟಿಸಿದ ಕೀರ್ತಿ ನಿಸ್ಸಾನ್ ಕಂಪನಿಯ ವಟನಬೆ ಅವರಿಗೆ ಸಲ್ಲುತ್ತದೆ.

ಪ್ರಧಾನಿ ಸಚಿವಾಲಯದ ಮಾಜಿ ಸಲಹೆಗಾರರಾದ ಮಾರಿಕೋ ಸುಗಹರ ಬಂಡೋ ಅವರ ಪ್ರಕಾರ "ಜಪಾನಿ ಉದ್ಯಮಿಗಳು ತಮ್ಮತನವೇ ಇಲ್ಲದವರು. ಅವರು ಬರೀ ಸಂಸ್ಥೆಯನ್ನು ಪ್ರತಿನಿಧಿಸುತ್ತಾರೆ. ಆದರೆ ಮಹಿಳೆಯರು ಹೆಚ್ಚು ಮಾನವೀಯರಾಗಿರುತ್ತಾರೆ. ಹೆಚ್ಚು ಹೆಚ್ಚು ಮಹಿಳೆಯರು ಕೆಲಸ ಮಾಡುವುದರಿಂದ ಜಪಾನಿಗೆ ಅವರು ಹೊಸ ರೂಪವನ್ನೇ ತಂದುಕೊಡಬಲ್ಲರು"

ಮಹಿಳಾ ಮ್ಯಾನೇಜರ್‌ಗಳನ್ನು ನೇಮಿಸಿಕೊಂಡಂತೆ ಜಪಾನಿನ ಕಂಪನಿಗಳು, ಪಾಶ್ಚಿಮಾತ್ಯ ರಾಷ್ಟ್ರದಲ್ಲಿರುವ ಕಂಪನಿಗಳು ಎದುರಿಸುತ್ತಿರುವ ಸಮಸ್ಯೆಯನ್ನು ಎದುರಿಸುತ್ತಿವೆ. ೨೦,೦೦೦ ಮಹಿಳೆಯರನ್ನು ನೇಮಿಸಿಕೊಂಡಿರುವ ಸೀಬು ಡಿಪಾರ್ಟ್‌ಮೆಂಟ್ ಸ್ಟೋರ್, ಕೆಲಸವನ್ನು ಮುಂದುವರಿಸುವ ಮಾತೆಯರಿಗಾಗಿ ಸಣ್ಣ ನರ್ಸರಿ ನಡೆಸುತ್ತಿದೆ. ಕೌಟುಂಬಿಕ ಹೊಣೆಗಾರಿಕೆ ಬಗ್ಗೆ ಅಗತ್ಯ ಮಾಹಿತಿಗಳನ್ನು ಬಯಸುವ ಉದ್ಯೋಗಸ್ಥ ಮಾತೆಯರಿಗೆ ಕುಟುಂಬಪಾಲನ ಶೀಘ್ರಮಾಹಿತಿ ವ್ಯವಸ್ಥೆಯನ್ನು ಜಪಾನ್ ಐಬಿಎಂ ೧೯೮೮ರ ಸೆಪ್ಟೆಂಬರ್‌ನಲ್ಲಿ ಆರಂಭಿಸಿತು.

ಜಪಾನಿ ಪುರುಷ ಉದ್ಯಮಿಗಳು ಯಾವುದೇ ಒಪ್ಪಂದ ರೂಪಿಸಲು ಮಧ್ಯಸೇವನೆಯ ಪಾರ್ಟಿಗಳನ್ನು ನಡೆಸುವುದನ್ನು ಬಿಡಲಾರರು. ಆದರೆ ಹೆಚ್ಚು ಹೆಚ್ಚು ಮಹಿಳೆಯರು ಉದ್ಯಮ ರಂಗಕ್ಕೆ ಪ್ರವೇಶಿಸಿದರೆ, ಎಲ್ಲಾ ಒಪ್ಪಂದಗಳೂ ಮುಸ್ಸಂಜೆಗೆ ಮುಂಚೆಯೇ ರೂಪುಗೊಳ್ಳುತ್ತವೆ. ಮಹಿಳೆಯರು ತಮ್ಮ ಎಲ್ಲಾ ವಾಣಿಜ್ಯ ವ್ಯವಹಾರಗಳನ್ನು ಹಗಲು ವೇಳೆಯಲ್ಲಿ ಮಾಡುತ್ತಾರೆ. ವಕಿಬಾ ವಿವರಿಸುತ್ತಾರೆ:— "ಜಪಾನಿ ಉದ್ಯಮಿಗಳಿಗೆ ಎರಡು ಸಾಲಗೆಗಳು ಎಂದು ಹೇಳಲಾಗುತ್ತದೆ. ಒಂದು ಕಛೇರಿಗೆ, ಇನ್ನೊಂದು ಹಡಖಾನೆಗೆ (ಪಬ್) ಮಹಿಳೆಯರಲ್ಲಿ ಈ ಪ್ರವೃತ್ತಿ ಇರುವುದಿಲ್ಲ. ಏಕೆಂದರೆ ಅವರಿಗೆ ವೇಳೆಯೂ ಇರುವುದಿಲ್ಲ. ಆಫೀಸ್‌ನಲ್ಲಿ ಕೆಲಸ ನಿರ್ವಹಿಸಿ ನಂತರ ರಾತ್ರಿ ಅವರು ಮನೆಗೆ ಹೋಗುತ್ತಾರೆ. ಜಪಾನಿ ಉದ್ಯಮಿಗಳು ಹೆಚ್ಚು ಮಾನವೀಯ ಆಯಾಮವನ್ನು ಪ್ರವೇಶಿಸಬೇಕಾದಲ್ಲಿ ಇದು ಬಹಳ ಮುಖ್ಯವಾದ ಪ್ರವೃತ್ತಿ.

ಹೀಗೇಕೆ ಮಾಡುವಿರಿ?

ನಾವು ವಾಸಿಸುತ್ತಿರುವ ನಮ್ಮ ಸುತ್ತ-ಮುತ್ತಲಿನ ಸಮಾಜವು ಇಂದು ಬಡವ-ಶ್ರೀಮಂತ ಮೇಲು-ಕೀಳುಗಳೆಂಬ ಸಾಮಾಜಿಕ ಸ್ಥರ ವಿನ್ಯಾಸದಿಂದ ತುಂಬಿ ಹೋಗಿದೆ, ವಿದ್ಯಾವಂತರಾದ ಉತ್ತಮ ತಿಳುವಳಿಕೆಯುಳ್ಳ ಪ್ರತಿಷ್ಠಿತ ವ್ಯಕ್ತಿಗಳೇ ಇಂತಹಾ ವ್ಯವಸ್ಥೆಗೆ ಅಡಿಪಾಯ ಹಾಕಿಕೊಟ್ಟಿರುವವರು ಎಂದರೆ ತಪ್ಪಾಗಲಾರದು. ಶ್ರೀಮಂತ ಮನೆಯ ಮಗಳು ಅಥವಾ ಮಗ ತಮಗಿಂತಾ ಕೆಳ ದರ್ಜೆಯ ಮನೆಯ ಮಕ್ಕಳೊಡನೆ ತಮ್ಮ ಮಕ್ಕಳು ಆಟವಾಡಿದರೆ ತಮ್ಮ ಘನತೆಗೆಲ್ಲಿ ಕುಂದು ಬರುವುದೋ ಎಂಬ ಕುಹಕ ಭಾವನೆ ಇವರದು. ಇವರ ಕುಚೋಧ್ಯವನ್ನೆಲ್ಲಾ ಅರಿತರೂ ಎದುರು ನಿಂತು ಮಾತನಾಡುವ ಧೈರ್ಯವಿಲ್ಲ ಎಳೆ ಕಂದಮ್ಮಗಳಿಗೆ. ದೇವರಿಗೆ ಸರಿ ತಪ್ಪುಗಳು ತಿಳಿದರೂ ಸಹಾ ಎದುರಿಗೆ ಬರಲಾರನು. ಮಕ್ಕಳೂ ಹಾಗೆಯೇ ನಿಜವೇನೆಂಬುದನ್ನು ಅರಿತರೂ ಮಾತನಾಡುವ ಸಾಹಸವಿಲ್ಲ ಇವರಿಗೆ.

ಮಕ್ಕಳಿಗೆ ಹಿರಿಯರ, ತಂದೆ-ತಾಯಿಗಳ ಶಾಲೆಯಲ್ಲಿ ಗುರುಗಳ ಮಾರ್ಗದರ್ಶನ ಅತ್ಯಾವಶ್ಯಕ. ಒಳ್ಳೆಯದನ್ನೂ, ಕೆಟ್ಟದನ್ನೂ ಎರಡನ್ನೂ ಸಹಾ ಸಮಾನ ದೃಷ್ಟಿಯಲ್ಲಿ ಸ್ವೀಕರಿಸುವವರು ಮಕ್ಕಳು. ಇಂತಹಾ ಮಕ್ಕಳೆದುರು ಯಾವ ವಿಚಾರ ಚರ್ಚಿಸಬೇಕು? ಚರ್ಚಿಸಬಾರದು ಎಂಬುದು ಬಹು ಮುಖ್ಯವಾದ ಅಂಶವಾಗಿದೆ. ಪ್ರತಿ ಹಂತದಲ್ಲೂ ಹಿರಿಯರ ನಡೆ-ನುಡಿಗಳನ್ನೇ ಅನುಸರಿಸುವ ಈ ಮಕ್ಕಳಿಗೆ ನಾವಿಂದು ಎಂತಹಾ ಮಾರ್ಗದರ್ಶಿಗಳಾಗಿರುವೆವು ಎಂಬುದನ್ನು ಈ ಚಿಕ್ಕ ಉದಾಹರಣೆಯಿಂದ ತಿಳಿಯಬಹುದು. ಒಮ್ಮೆ ಶ್ರೀಮಂತ ಮನೆತನದವರೊಬ್ಬರು ತಮ್ಮ ಮಗನಿಗೆ ಮದುವೆಯಲ್ಲಿ ಕೊಡಬೇಕಾಗಿದ್ದ ವರದಕ್ಷಿಣೆ ಬಾಕಿ ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಮದುವೆಯನ್ನೇ ನಿಲ್ಲಿಸಿಬಿಟ್ಟರಂತೆ. ಈ ಘಟನೆಯಿಂದ ಪುಟ್ಟ ಮಗುವಿನ ಮನಸ್ಸಿನ ಮೇಲೆ ಎಂತಹಾ ಪರಿಣಾಮ ಬೀರಿದೆ ಎಂದರೆ, ಮರುದಿನ ಮಗವು ಮದುವೆ ಆಟ ಆಡೋಣ ಎಂದು ಗೊಂಬೆಗೆ ಮದುವೆ ಏರ್ಪಡಿಸಿ ವರದಕ್ಷಿಣೆ ಒತ್ತಾಯಿಸಿ ಕೊಡಲಿಲ್ಲವೆಂಬ ಕಾರಣಕ್ಕೆ ಮದುವೆಯನ್ನೇ ನಿಲ್ಲಿಸಿಬಿಟ್ಟಿತು. ತಂದೆ ತಾಯಿ ಮಗುವನ್ನು ಕೇಳಿದ್ದಕ್ಕೆ ಮಗುವಿನ ಉತ್ತರವು ಈ ರೀತಿ ಇತ್ತು.

"ಡ್ಯಾಡಿ, ಹೆಣ್ಣಿನವರು ವರದಕ್ಷಿಣೆ ಕೊಡಲಿಲ್ಲವೆಂದು ಅಣ್ಣನ ಮದುವೆ ನಿಲ್ಲಿಸಿಬಿಟ್ರು. ಅದಕ್ಕೇ ನಾನೂ ಹಾಗೇ ಮಾಡಿದೆ" ಎಂದಿತು. ಆಗ ಆ ತಂದೆ — ತಾಯಿಗಳಿಗೆ ತಮ್ಮ ತಪ್ಪಿನ ಅರಿವಾಯಿತಂತೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಈ ಮಾತು ನೆನಪಿಗೆ ಬರುತ್ತಿದೆ, "ಪಾಂಡಿತ್ಯ ಯಾರಲ್ಲೇ ಇರಲಿ, ಅವರಿಗೆ ತಲೆ ಬಾಗೋಣ, ಆದರೆ ಅವರ ತೀರ್ಮಾನಗಳಿಗೆ ನಾವು ಬದ್ಧರಾಗಬೇಕಿಲ್ಲ" ಎಂದಿದ್ದಾರೆ. ನಿಜವಾಗಿಯೂ ಈ ಮಾತು ಎಷ್ಟು ಸಮಂಜಸವಾಗಿದೆಯಲ್ಲವೆ? ಸಮಾನತೆ, ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಗಂಟೆಗಟ್ಟಲೆಗಳ ಕಾಲ ಭಾಷಣ ಬಿಗಿಯುವರು. ತಮ್ಮ ಈ ಭಾಷಣದಿಂದಲೇ ಜನರಿಂದ ಶಹಬಾಸ್ ಗಿರಿ ಪಡೆಯುವರು. ಕಾರ್ಯದಿಂದಂತೂ ಖಂಡಿತಾ ಅಲ್ಲ. ಇಷ್ಟೇ ಏಕೆ, ತಮ್ಮ ಮಗಳು ಹುಡುಗರ ಗುಂಪಿನಲ್ಲಿ ಆಟವಾಡುತ್ತಿದ್ದರೆ, "ಹುಡುಗರ ಜೊತೆ ಆಟ ಆಡಬೇಡ, ಹುಡುಗಿಯರ ಜೊತೆಯಲ್ಲಿ ಆಟವಾಡು" ಎನ್ನುವರು. ಈ ವರ್ತನೆಯಿಂದ ಮಕ್ಕಳ ಮನಸ್ಸಿನಲ್ಲಿ ಕೀಳುಭಾವನೆ, ಸಂಕೋಚ, ಭಯದ ವಾತಾವರಣಕ್ಕೆ ಅಡಿಪಾಯ ಹಾಕಿಕೊಟ್ಟಂತೆ ಅಲ್ಲವೆ?

ಪ್ರತೀ ನಿತ್ಯ ಮನೆಯ ನೆಲವನ್ನು ಒರೆಸುವಂತೆ ಮಕ್ಕಳ ಮನವನ್ನು ಸದ್ವಿಚಾರಗಳಿಂದ ಒರೆಸುವ ಪ್ರಯತ್ನ ಮಾಡುವಂತಾಗಬೇಕಲ್ಲವೆ? ತಮ್ಮ ಮಗಳು ಒಂದೇ ತರಗತಿಯ ಪಕ್ಕದ ಮನೆಯ ತನ್ನ ಸಹಪಾಠಿಯೊಂದಿಗೆ ಮಾತನಾಡಿದರೂ ಹುಡುಗರ ಜೊತೆ ಅದೇನೇ ಮಾತು ಎನ್ನುವರು. ಈ ರೀತಿಯ ಕುಹಕ ನುಡಿಯುವವರು ಮತ್ತ್ಯಾರೂ ಅಲ್ಲ. ವಿದ್ಯಾವಂತರೆನಿಸಿಕೊಂಡವರೇ ಹೊರತು ಅವಿದ್ಯಾವಂತರಲ್ಲ. ಹೆಣ್ಣು ಮಕ್ಕಳಾಗಿ ಹುಟ್ಟುವುದೇ ನಮ್ಮ ಕರ್ಮವೇ? ಹೆಣ್ಣು ಮಗುವು ಹುಟ್ಟಿತು ಎಂದರೆ, ಅಯ್ಯೋ! ಹೆಣ್ಣೇ ಎಂದು ಮೂಗು ಮುರಿಯುವರು. ಗಂಡಾದರೆ ಹುಟ್ಟುವಾಗಲೇ ಕಿರೀಟ ಹೊತ್ತು ತರುತ್ತಾರೆಂಬ ಭಾವನೆ ಇವರದು. ಈ ಕೊಂಕು ನುಡಿ ಇಂದಿನದಲ್ಲ. ಅನಾದಿ ಕಾಲದಿಂದಲೂ ಹೀಗೆಯೇ ಕೊಂಕು ನುಡಿಯುತ್ತಾ ಬಂದಿದ್ದಾರೆ.

ಇಂದು ಉತ್ತಮ ಪೋಷಾಕು ಧರಿಸಿ ದುಬಾರಿ ಬೆಲೆಯ ಬಟ್ಟೆ ಧರಿಸಿದ ವ್ಯಕ್ತಿಯನ್ನು ನಾಗರೀಕ ಮತ್ತು ಸುಸಂಸ್ಕೃತ ವ್ಯಕ್ತಿ ಎಂಬುದಾಗಿ ತಿಳಿಯುವರು. ಇಂತಹವರನ್ನು ನಾಗರೀಕರು ಎಂಬುದಾಗಿ ಪರಿಗಣಿಸಿ ಗೌರವಿಸುವುದು ಖಂಡಿತವಾಗಿಯೂ ನಮ್ಮ 'ಮೂರ್ಖತನವೇ' ಸರಿ. ನಾಗರೀಕರು ಎಂದರೆ, ಸಾರ್ವಜನಿಕ ನಿಂದೆ, ಟೀಕೆಗಳು ಬರಬಹುದೆಂದು ಹೆದರಿ, ನೀತಿವಂತನಾಗಿ, ಸಂಭಾವಿತನಂತೆ ನಡೆಯುವವನು ಮತ್ತು ತನ್ನ ಅಂತಃಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳುವವರನ್ನು 'ಸುಸಂಸ್ಕೃತರು' ಎಂಬುದಾಗಿ ಸಮಾಜಶಾಸ್ತ್ರಜ್ಞರೊಬ್ಬರ ಅಭಿಪ್ರಾಯವಿದು. ಇಂದು ವ್ಯಕ್ತಿಯ ವೇಷ-ಭೂಷಣಗಳಿಂದ ಅವನನ್ನು ಗೌರವಿಸುವರು ಹಾಗೂ ಅವನ ಯೋಗ್ಯತೆಯನ್ನೂ ಸಹಾ ಇದರಿಂದಲೇ ಅಳೆಯುವರು.

ಒಬ್ಬ ವ್ಯಕ್ತಿಯ ಒಳ್ಳೆಯ ಗುಣಕ್ಕಾಗಲೀ ಅಥವ ಅವನ ವ್ಯಕ್ತಿತ್ವಕ್ಕಾಗಲೀ ಇಂದು ಬೆಲೆಯೇ ಇಲ್ಲದಂತಾಗಿದೆ. ಈ ಎಲ್ಲಾ 'ಅಂತರಗಳನ್ನೂ ಸಹಾ 'ನಾಗರೀಕ' ರೆನಿಸಿಕೊಂಡವರೇ 'ಅನಾಗರೀಕ' ರೀತಿಯಲ್ಲಿ ವರ್ತಿಸುತ್ತಿರುವುದನ್ನು ನಾವಿಂದು ನೋಡುತ್ತಲೇ ಇದ್ದೇವೆ. ನಮ್ಮ ಕಾಲೇಜಿನಲ್ಲಿ ಮೊನ್ನೆ ಮುಷ್ಕರ ನಡೆಯಿತು. ಕಾಲೇಜು ಅಂದಮೇಲೆ ಮುಷ್ಕರಗಳು ಇದ್ದೇ ಇರಬೇಕಲ್ಲವೇ? ಅನಾವಶ್ಯಕ ಬೇಡಿಕೆಗಳ ಅನಾವಶ್ಯಕ ಮುಷ್ಕರಗಳು ಮಾಮೂಲು ಎನ್ನಿ, ಇಂತಹಾ ಮುಷ್ಕರ ನಡೆಯುತ್ತಿದ್ದಾಗ ವಿದ್ಯಾರ್ಥಿಗಳೆಲ್ಲರೂ ಒಮ್ಮೆಗೇ ಕ್ಲಾಸ್-ರೂಮ್‌ಗೆ ಧಾಳಿ, ನಾವೆಲ್ಲ ಏನು ಮಾಡಲು ತೋಚದೆ ಎಲ್ಲರೂ ಒಂದೆಡೆ ನಿಂತಿದ್ದೆವು. ನಮ್ಮ ಉಪನ್ಯಾಸಕರು, "ಹುಡುಗರೆಲ್ಲ ರೀಡಿಂಗ್-ರೂಮ್‌ಗೆ ಹೋಗಿ, ಹುಡುಗಿಯರೆಲ್ಲಾ ಲೇಡೀಸ್ ರೂಂಗೆ ಹೋಗೀಮ್ಮಾ" ಎನ್ನುವುದೇ?

ನಮಗೂ ರೀಡಿಂಗ್-ರೂಮ್ ಗೆ ಹೋಗಿ ಎಂದಿದ್ದರೆ ಏನಾಗುತ್ತಿತ್ತು ಇವರಿಗೆ? ನಾಗರೀಕರೆನಿಸಿಕೊಂಡಿರುವವರು, ವಿದ್ಯಾವಂತರೆನಿಸಿಕೊಂಡಿರುವವರು ಇನ್ನಾದರೂ ನಿಜವಾದ ನಾಗರೀಕರಾಗಿ ಪೂರ್ಣ ಪ್ರಯತ್ನದಿಂದ ಮಕ್ಕಳನ್ನು ಸದ್ವಿಚಾರ ಪೂರ್ಣ ಗುಣವಂತ ಮಕ್ಕಳನ್ನಾಗಿ ಮಾಡಿದಾಗ ಸಿಗುವ ಆನಂದಕ್ಕೆ ಬೆಲೆ ಕಟ್ಟಲು ಸಾಧ್ಯವೇ? ಆದರೆ ಇಂದು ಎಷ್ಟು ಸತ್ಯ ಈ ಮಾತು! ಪುಟ್ಟ ಮಗುವೊಂದು ಸಿಕ್ಕಿದ್ದೆಲ್ಲಾ ಬಾಯಿಗೆ ಹಾಕಿಕೊಂಡಾಗ ತಾಯಿ ಓಡಿ ಬಂದು ಮಗುವಿನ ಬೆಳವಣಿಗೆಗೆ ಅಹಿತವಾದುದನ್ನು ಹೇಗೆ ಕಿತ್ತು ಬಿಸಾಡುವಳೋ ಅಂತೆಯೇ ಪಾಲಕರೂ ಮಕ್ಕಳ ಅಭಿರುಚಿಯಿಂದ ಅವರ ಬೆಳವಣಿಗೆ ದೃಷ್ಟಿಯಿಂದ ಬೇಡವಾದದ್ದನ್ನು ಮಕ್ಕಳ ಅಭಿರುಚಿಯಿಂದ ತೆಗೆದುಹಾಕಿ, ಮಕ್ಕಳಿಗೆ ಬೇಕಾದ ಉತ್ತಮ ಅಭ್ಯಾಸಗಳನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಾವಶ್ಯಕವಲ್ಲವೇ?

ಸಂಧ್ಯಾರಾಣಿ
ಕನಕಪುರ

ಅಮೃತ್ ಕೌರ್

ಅಮೃತ್ ಕೌರ್ ಲಖನೌದಲ್ಲಿ ೧೮೮೯ ಫೆ. ೨ ರಂದು ಜನಿಸಿದರು. ರಾಜಮನೆತನಕ್ಕೆ ಸೇರಿದ ಇವರಿಗೆ ಸ್ತ್ರೀಯರ ಉದ್ಧಾರ ಜೀವನದ ಧ್ಯೇಯವಾಗಿತ್ತು. ಬಾಲ್ಯವಿವಾಹ, ಪರದಾಪದ್ಧತಿ, ಅನಕ್ಷರತೆ ಇವನ್ನು ತೊಡೆದು ಹಾಕದೆ ಸ್ತ್ರೀಯರು ಮುಂದುವರೆಯುವುದಿಲ್ಲವೆಂದು ಬಲವಾಗಿ ನಂಬಿದ್ದರು. "ಹಿಂದೂ ಮನೆಗಳಲ್ಲಿ ವಿಧವೆಯರ ಸ್ಥಿತಿ, ಮದುವೆ ಹಾಗು ಸ್ತ್ರೀಯರಿಗೆ ಪಿತ್ರಾರ್ಜಿತ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕು" ಎಂದು ಭಾವಿಸುತ್ತಿದ್ದರು. ಹರಿಜನೋದ್ಧಾರ, ಅಹಿಂಸಾ ತತ್ವಗಳಲ್ಲಿ ಅವರಿಗೆ ಅಚಲ ನಂಬಿಕೆ.

ಗಾಂಧೀಜಿಯ ಅತ್ಯಂತ ನಿಕಟವರ್ತಿಯಾಗಿದ್ದ ಅಮೃತ್ ಕೌರ್ ೧೭ ವರ್ಷಗಳ ಕಾಲಅವರ ಕಾರ್ಯದರ್ಶಿಯಾಗಿದ್ದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕಾಗಿ ಹಾಗೂ "ಕ್ವಿಟ್ ಇಂಡಿಯಾ" ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಬಂಧಿಸಲ್ಪಟ್ಟಿದ್ದರು.

೧೯೩೦ ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿಯಾಗಿ ಅವರು ಕೆಲಸ ಮಾಡಿದರು. "ಮಹಿಳಾ ಸಂಘದ" ದ ಅಧ್ಯಕ್ಷರಾಗಿ ಮೂರು ವರ್ಷ ಸೇವೆ ಸಲ್ಲಿಸಿದರು, "ಹಿಂದುಸ್ಥಾನಿ ತಾಲೀಮಿ ಸಂಘ" ದ (ಮೂಲ ಶಿಕ್ಷಣವನ್ನು ಕುರಿತು ಸಂಘ) ಸದಸ್ಯೆಯಾಗಿದ್ದರು. ಯುನೆಸ್ಕೋ ಸಮ್ಮೇಳನದ ಭಾರತೀಯ ಪ್ರತಿನಿಧಿಯಾಗಿ ಎರಡು ಬಾರಿ ಭಾಗವಹಿಸಿದರು. ಸ್ವಾತಂತ್ರ್ಯದ ನಂತರ ಆರೋಗ್ಯ ಸಚಿವೆಯಾಗಿ ಕೇಂದ್ರ ಸಚಿವ ಸಂಪುದಲ್ಲಿದ್ದರು.

ವ್ಯಾಯಾಮ, ಕ್ರೀಡೆಗಳಲ್ಲೂ ಇವರು ನಮ್ಮ ರಾಷ್ಟ್ರದ ಕ್ರೀಡಾ ಪಟುಗಳಿಗೆ ತರಬೇತಿ ಕೊಡುವ ವ್ಯವಸ್ಥೆಯೊಂದನ್ನು ರೂಪಿಸಿದರು,

ಅವಿವಾಹಿತರಾಗಿದ್ದ ಅವರು ೧೯೬೪ಳ ಮೃತರಾದರು.

(ಕೃಪೆ: ಜ್ಞಾನ ಗಂಗೋತ್ರಿ)

ಜಯವಾಗಲಿ ನಿನಗೆ

ಭುವನೇಶ್ವರಿ ಹೆಗಡೆ
ಮಂಗಳೂರು

ಜಯವಾಗಲಿ ನಿನಗೆ!
ಎಂದೋ ಎಲ್ಲೋ ಅಣುರೂಪಿಯಾಗಿ ಹುಟ್ಟಿ
ನಿಟ್ಟುಸಿರ ಕಣ್ಣೀರ ಸವಿಯುತ್ತ ಹೀರುತ್ತ
ಕೊಬ್ಬಿ ನಿಂತಿದ್ದೀಯೆ
ಎಳೆ ಬಾಲೆಯರ ಕನಸ ನುಂಗಿ ಚಪ್ಪರಿಸುತ್ತ
ಹೆಣ್ಣು ಹಡೆದವರ ಪಾತಾಳಕೊತ್ತಿ
ಅಟ್ಟಹಾಸಗೈದಿದ್ದೀಯೆ
ಜಯವಾಗಲಿ ನಿನಗೆ!

ವಧುವಿನರಿಶಿನ ಕೆನ್ನೆಗುಂಟ ಹರಿದ ಕಣ್ಣೀರಿನಲಿ
ವರನ ಕೈ ಹಿಡಿದ ಮೃದು ಹಸ್ತದ ಬೆವರಿನಲಿ
ಪ್ರತಿಫಲಿಸಿದ್ದೀಯೆ!

ಹೊಸ ಬಾಳಿನ ಕಿಲ ಕಿಲ ನಗು ಪಿಸು ಮಾತು
ಸರಸ ಸತ್ತ ಸ್ಮಶಾನ ಮೌನ
ನಿಟ್ಟುಸಿರು ಬಿಕ್ಕಳಿಕೆ ಆಡಲಾರದ ನೋವು
ಕೊನೆಗೊಂದು ದಿನ ....
ಉರಿವ ಬೆಂಕಿಯು ಒಳಗೆ ಎಲ್ಲ ಶಾಂತ
ನಿನಗೋ ಮೃಷ್ಟಾನ್ನ ಉಂಡ ತೆರ ಪರಮ ತೃಪ್ತಿ.
ಜಯವಾಗಲಿ ನಿನಗೆ!

ನೀನು ಸೊರಗದ ಹಾಗೆ ಕಾದು ಜೋಪಾನದಲಿ
ದಿನಕೊಂದು ಹೊಸ ವೇಷ ಉಡುಗೆ ತೊಡುಗೆಯನಿತ್ತು
ಶೃಂಗರಿಸಿ ಪೂಜಿಸುತ ಮೆರೆಸುವವರಿಗಿದೋ
ನನ್ನ ಅಭಿನಂದನೆ!

ಇನ್ನು ಹೆಣ್ಣು ಹಡೆದವರೆ.........
ಹೆಣ್ಣು ಹಡೆದದ್ದೇಕೆ ಬಡವರಾದದ್ದೇಕೆ
ನಿಮ್ಮ ತಪ್ಪಿಗೆ ದಂಡ ತೆರಲೇಬೇಕು
ಸತ್ಯ ನ್ಯಾಯದ ಹುಚ್ಚು, ಪ್ರೀತಿ ಪ್ರೇಮದ ಭ್ರಮೆಯ
ಬಿಟ್ಟೊಮ್ಮೆ ಬದುಕುವುದ ಕಲಿಯಬೇಕು
ಸೊಪ್ಪು ಸದೆ ಮೆಲ್ಲುತ್ತ ಕುರಿಯಾದರೂ ಸರಿಯೆ
ಬಾಳು ಸಾಗಿಸಿ ಬೇರೆ ಏಕೆ ಬೇಕು?

ಮತ್ತಿನ್ನು ಹುಡುಗಿಯರೇ — ಏಳು, ಮಲ್ಲಿಗೆ ತೊಕದೆಳೆ
ಬಾಲೆಯರೇ

ಹುಚ್ಚು ಆಸೆಯ ಬಿಟ್ಟು
ಕನಸನೆದೆಯಲೆ ಹುಗಿದು
ನಿಮ್ಮ ಹುಟ್ಟಿನ ಕೊನೆಯ ಕಾಯಬೇಕು
ಉರಿವ ಬೆಂಕಿಯ ಕರೆಗೆ
ಮರು ಮಾತನಾಡದೆಯೆ
ಓಗೊಟ್ಟು ಬಲು ಬೇಗ ಸಾಯಬೇಕು

ಇನ್ನೇನೆನ್ನಲಿ ಓ ವರದಕ್ಷಿಣೆಯೇ
ನಿನ್ನ ಪರಮ ಆರೋಗ್ಯಕ್ಕೆ ನನ್ನ ಪ್ರಾರ್ಥನೆಯಿಹುದು
ಸಂಭ್ರಮದ ದರ್ಬಾರು ನಡೆದೆಯಿರಲಿ
ಕಂಬನಿಗು ಕರಗದಿರು ನೋವಿಗೂ ಕೊರಗದಿರು
ನಿನ್ನ ತಾಂಡವ ನೃತ್ಯ ನಿಲ್ಲದಿರಲಿ
ನಿನ್ನೆದೆಯು ವಜ್ರಕ್ಕೆ ಮಾರು ಹೋಗಿದ್ದೇನೆ
ಸರ್ವ ಭಕ್ಷನೆ ನಿನಗೆ ಜಯವಾಗಲಿ!
ವಧುಗಳೆದೆ ಕನಸುಗಳ ಹುಗಿದ ಗೋರಿಯ ಮೇಲೆ
ನಿನ್ನ ರಕ್ತ ಧ್ವಜವು ಹಾರುತಿರಲಿ
ಸರ್ವ ಭಕ್ಷನೆ ನಿನಗೆ ಜಯವಾಗಲಿ

ಸಿನಿಮಾ: ವೈಭವೀಕರಣದ ವಿಷವರ್ತುಲದಲ್ಲಿ

ವಿಜಯಾ

ಅಕ್ಷರ ಜ್ಞಾನ ಜನ ಸಾಮಾನ್ಯನ ಜೀವನಮಟ್ಟವನ್ನ, ಅರಿವಿನ ಮಟ್ಟವನ್ನ ವೃದ್ಧಿಸುತ್ತದೆನ್ನುವುದು ಒಂದು ನಂಬಿಕೆ. ಈ ದಿಕ್ಕಿನಲ್ಲಿ ಹಲವು ಬಗೆಯ ಪ್ರಯತ್ನಗಳು ನಡೆದಿದ್ದರೆ ಸಮ್ಮತವಾದ ಮಾತೇ. ಆದರೆ ಕೇವಲ ಅಕ್ಷರ ಜ್ಞಾನ, ಆಧುನಿಕತೆ — ನಾಗರೀಕತೆಯತ್ತ ಕೆಳವರ್ಗದ ಜನರನ್ನು ಒಲಿಸುವುದು ಇತ್ಯಾದಿಗಳು "ಆದರ್ಶಗಳಲ್ಲಿಯು ಹುಂಬತನ" ಅನ್ನಿಸುವುದು ಎಲ್ಲಿಂದರೆ ಈ ಎಲ್ಲ ಸುಧಾರಣೆಗಳೂ ತೀರಾ ಮೇಲು ಸ್ತರದಲ್ಲಿ ಆದಾಗ, ಮಧ್ಯಮವರ್ಗದ ಜೀವನ ಕ್ರಮ, ಅಲ್ಲಿ ಸ್ವೀಕೃತವಾದ ಕೆಲವು ಮೌಲ್ಯಗಳಿಗೆ ಬಹುಬೇಗ ಆಕರ್ಷಿತವಾಗುವ ಕೆಳವರ್ಗದ ಜನರಿಗೆ ಇಲ್ಲಿ ಅಸಹನೀಯವಾಗುತ್ತಿರುವ ಮೌಲ್ಯಗಳು ಆದರ್ಶವಾಗಿ ಬಿಡುತ್ತವೆ ಮತ್ತು ಅದಕ್ಕಾಗಿ ಆತ ತಾನು ತುಂಬ ಸಂಧಾರಿಸಿದವನೆಂದು ಬೀಗುತ್ತಾನೆ. ಈ ಅಪಾಯಗಳನ್ನು ಅರ್ಥಮಾಡಿಕೊಳ್ಳದೆ ಸುಧಾರಣೆಯ ನೆಪದಲ್ಲಿ ಮತ್ತೊಂದು ದುರಂತದತ್ತ ಜನತೆಯನ್ನು ಕೊಂಡೊಯ್ಯುತ್ತಿರುತ್ತೇವೆ. ಮಧ್ಯಮವರ್ಗದ ಜೀವನ ವಿಧಾನದಲ್ಲಿಯ ಕೆಲವು ನಿರ್ಬಂಧಗಳು— ವ್ಯಕ್ತಿ–ವ್ಯಕ್ತಿ ಸಂಬಂಧಗಳಿಗೆ ಹಾಕಿಕೊಂಡ ಹಲವು ಕಟ್ಟುಪಾಡುಗಳು ಇಂದು ಆ ವರ್ಗವನ್ನೂ ಅವುಗಳಿಂದ ಬಿಡಿಸಿಕೊಳ್ಳಲು ಹೋರಾಡುವ ಸ್ಥಿತಿಗೆ ತಂದಿದೆ ಎಂಬುದಕ್ಕೆ ವರದಕ್ಷಿಣೆಯಿಂದ ಹಿಡಿದು ವ್ಯಕ್ತಿಯ ನೈತಿಕತೆಯವರೆಗೆ ಎಲ್ಲ ಸ್ತರದಲ್ಲೂ ಉದಾಹರಣೆಗಳನ್ನು ಕೊಡಬಹುದಾಗಿದೆ. ಇಲ್ಲಿ ಒಲ್ಲದಾದ, ಬಿಡಿಸಿಕೊಳ್ಳಬೇಕೆಂದು ಹಂಬಲಿಸುವ ಸ್ಥಿತಿಯೊಂದಕ್ಕೆ ಇನ್ನೊಂದು ವರ್ಗವನ್ನು ತಂದು ತುಂಬುತ್ತಿದ್ದೇವೆ. ಅಕ್ಷರಜ್ಞಾನದ ಜತೆಗೇ ಕೆಲವು ಮೌಲ್ಯಗಳು ಹುಸಿ. ಅವು ಅನುಕರಣ ಯೋಗ್ಯವಲ್ಲ ಎಂಬ ಎಚ್ಚರವನ್ನು ಕೊಡದೇ ಹೋದರೆ ನಾಳೆಗಳು ಮತ್ತೆ ಭ್ರಮನಿರಸನದತ್ತಲೇ ಸರಿಯುತ್ತಿರುತ್ತವೆ! ಈ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಚರ್ಚಿಸಿದ್ದೆವು.

ಸಮೂಹ ಮಾಧ್ಯಮಗಳು ಅದರಲ್ಲೂ ಸಿನಿಮಾದಂಥ ಜನಪ್ರಿಯ ಮಾಧ್ಯಮ ಇಂಥ ಅಪಾಯಗಳನ್ನು ಹೇಗೆ ತರಬಲ್ಲದು ಎಂಬುದನ್ನು ಇತ್ತೀಚೆಗೆ ಬಿಡುಗಡೆಯಾದ ಚಿತ್ರವೊಂದರ ವಿವರಗಳ ಮೂಲಕ ಗುರುತಿಸಬಹುದು. ಸಾಮಾನ್ಯವಾಗಿ ಮಹಿಳೆಯರ ಶೋಷಣೆ, ಪ್ರಗತಿವಿರೋಧಿ, ಇತ್ಯಾದಿ ಮಾತುಗಳನ್ನು ಬೇರೆಬೇರೆ ಕಾರಣಕ್ಕಾಗಿ ಹೇಳುತ್ತಿರುತ್ತೇವೆ. ಮಹಿಳಾ ಸಂಘಟನೆಗಳು ಕೆಲವು ಚಿತ್ರಗಳ ವಿರುದ್ಧ ಪ್ರತಿಭಟನೆಯನ್ನೂ ನಡೆಸಿವೆ.

"ಅನಂತನ ಅವಾಂತರ" ದಂಥ ಚಿತ್ರವನ್ನು ಪ್ರತಿಭಟಿಸುವಾಗ ಕಂಡಷ್ಟು ನೇರವಾದ ಕಾರಣಗಳು ಬೇರೆಡೆ ಕಾಣದಿರಬಹುದು. ಆದರೆ ಅದಕ್ಕಿಂತ ಹೆಚ್ಚಿನ ಅಪಾಯ ತರುವಂಥ, ಸೂಕ್ಷ್ಮ ಮನಸ್ಸಿನ ಸ್ತ್ರೀಯರ ಮೇಲೆ ಗಾಢವಾದ ಪರಿಣಾಮ ಬೀರಬಲ್ಲಂಥ ಅನೇಕ ಯಥಾಸ್ಥಿತಿವಾದೀ ಪ್ರಗತಿವಿರೋಧಿ ನಿಲವುಗಳು ಇರುವ ಅನೇಕ ಚಿತ್ರಗಳ ಬಗ್ಗೆ ಚಕಾರ ಎತ್ತುವುದಿಲ್ಲ. "ಅನಂತನ ಅವಾಂತರ" ಚಿತ್ರವನ್ನು ಪ್ರತಿಭಟಿಸಿದ ಮಹಿಳೆಯ ಬಗ್ಗೆ ಪುರುಷ ಆಕ್ಷೇಪಿಸುವುದಿಲ್ಲ. ಆದರೆ ಮತ್ತೆ ಕೆಲವು ಚಿತ್ರಗಳನ್ನು ವಿರೋಧಿಸಿದರೆ ಅಂಥ ಬೆಂಬಲ ಆತನಿಂದ ದೊರೆಯದೇ ಹೋಗಬಹುದು. ಅಂತೇ ಸ್ತ್ರೀ ತನಗೇ ತಿಳಿಯದ ಹಾಗೆ ತನ್ನ ಪ್ರತಿಭಟನೆಯನ್ನು ಪುರುಷನೂ ಸಮ್ಮತಿಸಿ ಸಹಕರಿಸುವಂಥ ವಿಚಾರಗಳತ್ತ ಮಾತ್ರ ಹೆಚ್ಚು ಒತ್ತುಕೊಡುತ್ತಿರುತ್ತಾಳೆ ಇವು ತಾಲಗಳ ಶಬ್ದಗಳ ನಡುವೆ ಇರುವ ಸೂಕ್ಷ್ಮಗಳು.

ಅಪಕ್ವ ಆಲೋಚನೆಗಳಿರುವ ನಿರ್ದೇಶಕರೊಬ್ಬರು ಮಹತ್ವಾಕಾಂಕ್ಷೆಯಿಂದ ತೆಗೆದ ಚಿತ್ರ "ಸ್ವರ್ಣ ಸಂಸಾರ" ವಿಚ್ಛೇದಿತ ದಂಪತಿಗಳ ಮಕ್ಕಳ ಅತಂತ್ರ ಸ್ಥಿತಿಯ ಬಗ್ಗೆ ಹೇಳ ಹೊರಟ ಅವರ ಉದ್ದೇಶದ ಬಗ್ಗೆ ನನ್ನ ಆಕ್ಷೇಪವಿಲ್ಲ. ಆದರೆ ಆ ವಿಚಾರದ ಪ್ರತಿಪಾದನೆ

ಗಾಗಿ ಬಳಸಿಕೊಂಡ ಇತರ ವಿವರಗಳು – ಮುಂತಾದವುಗಳ ಪರಿಣಾಮ ಗಮನಿಸಿದಾಗ ಎದುರಾಗುವ ಪ್ರಶ್ನೆಗಳೇ ಬೇರೆ.

ಆತ ಬ್ರಹ್ಮಚಾರಿ, ಸಾಮಾನ್ಯ ಗುಮಾಸ್ತ. ವಿವಾಹ ಎಂದರೆ ಖರ್ಚಿನ ಬಾಬತ್ತು, ತನ್ನ ಸಂಪಾದನೆಯಲ್ಲಿ ಸಾಗದ ಮಾತು ಎಂಬ ಕಾರಣಕ್ಕೆ ಆತ ಅವಿವಾಹಿತನಾಗೇ ಇರಲು ನಿರ್ಧರಿಸಿದ. ಆದರೆ ಕನ್ಯಾಪಿತೃಗಳು, ವಿವಾಹ ಮಾಡಿಸುವ ದಳ್ಳಾಳಿಗಳು ಆತನ ಮನವೊಲಿಸಿ, ಆತನ ಸಂಪಾದನೆಯಲ್ಲಿ ಇನ್ನೂ ಉಳಿತಾಯ ಸಾಧ್ಯವಾಗುವುದು ಮದುವೆಯಾಗಿ ಮನೆಗೆ ಬರುವ ಮಡದಿ ಮನೆಗೆಲಸ, ಅಡಿಗೆ ಇತ್ಯಾದಿ ಕೆಲಸ ನಿರ್ವಹಿಸುವುದರಿಂದ ಸಾಧ್ಯ ಎಂಬ ಸಮಜಾಯಿಷಿ ನೀಡಿ ಒಪ್ಪಿಸುತ್ತಾರೆ. ವಿವಾಹವಾದ ಮೊದಲ ರಾತ್ರಿ ತನ್ನ ಮಡದಿ ಓದಿ ಏನೋ ಸಾಧಿಸಬೇಕೆಂಬ ಅಪೇಕ್ಷೆ ಇದ್ದೂ, ಹತ್ತವರ ಆರ್ಥಿಕ ಸ್ಥಿತಿಯಿಂದಾಗಿ ಅರ್ಧಕ್ಕೇ ನಿಲ್ಲಿಸಿ ಮದುವೆಯಾದಳೆಂದು ತಿಳಿದಾಗ ತಾನೇ ಆಕೆಯನ್ನು ಕಾಲೇಜಿಗೆ ಸೇರಿಸಿ ಸಹಕರಿಸುತ್ತಾನೆ. ವಿವಾಹಿತರು ಕಾಲೇಜಿಗೆ ಹೋಗುವುದೇನೂ ಇಂದು ಹೊಸದಲ್ಲ. ಆದರೆ ಅದಕ್ಕಾಗಿ ಆತ ಮಾಡುವ ತ್ಯಾಗ, ನಿರ್ವಹಿಸುವ ಮನೆಗೆಲಸ ಇವನ್ನೆಲ್ಲ ತುಸು ಅತಿಯೆಂಬಂತೆ ವೈಭವಿಸಿ, ಹೀಗೆ ಮಡದಿಯನ್ನು ಕಾಲೇಜಿಗೆ ಕಳಿಸುವುದೆಂದರೆ ಗಂಡನಿಗೊಂದು ಶಿಕ್ಷೆ ಎಂಬಂಥ ರೀತಿಯಲ್ಲಿ ವರ್ಣಿಸಲಾಗಿದೆ. ಈ ದಿನಗಳಲ್ಲಿ ಮದುವೆಯಾದ ಕೂಡಲೇ ಯಾರೂ ಮಕ್ಕಳಾಗಲೆಂದು ಇಚ್ಛಿಸುವುದಿಲ್ಲ. ಮತ್ತು ಸಂತತಿ ನಿರೋಧದ ಉಪಕರಣಗಳ ಬಳಕೆಯೂ ಬಹುದೊಡ್ಡ ವಿಚಾರವಲ್ಲ. ವಿದ್ಯಾಭ್ಯಾಸ ಮುಗಿಯುವವರೆಗೆ ನಿಯಂತ್ರಣ ಎಂಬ ದಂಪತಿಗಳ ಒಪ್ಪಂದದಿಂದಾಗಿ ನೆರೆಹೊರೆಯವರು ಆಕೆಗೆ ಬಂಜೆ ಪಟ್ಟ ಕಟ್ಟಿ ಹೀಯಾಳಿಸುವ ಆಕೆಯ ಗಂಡನನ್ನ ಅಪಮಾನಿಸುವ, ಆಕೆ ಓದುತ್ತಿರುವುದೊಂದು ಅಪರಾಧ ಎನ್ನುವಂಥ ವಾತಾವರಣ ಕಲ್ಪಿಸುವ ನಿರ್ದೇಶಕರು ಇನ್ನೂ ಯಾವ ಶತಮಾನದಲ್ಲಿದ್ದಾರೆ ಎನ್ನಿಸಿ ಮುಜುಗರವಾಗುತ್ತದೆ. ಆಕೆ ಡಿಗ್ರಿ ಪಡೆದ ನಂತರ ಉದ್ಯೋಗದ ಬೇಟೆ, ರಾಶಿಗಟ್ಟಲೆ ಅರ್ಜಿಗಳು....... ಆತನ ಆಫೀಸ್‌ನ ಮಾಲೀಕ ತನ್ನ ಕಂಪನಿ ನಷ್ಟದಲ್ಲಿ ನಡೆಯುತ್ತಿದ್ದರೂ ಕೆಲಸಗಾರರಿಗಾಗಿ ನಡೆಸುತ್ತಿದ್ದ ಉದಾರಿ! ಆತನೇ ಆಕೆಗೆ ಕೆಲಸ ಕೊಟ್ಟು (ಒಮ್ಮೆಲೆ ಆಡ್ಮಿನಿಸ್ಟ್ರೇಟಿವ್ ಆಫೀಸರ್) ದೊಡ್ಡತನ ತೋರುತ್ತಾನೆ. ಈಗ ಆಕೆಯ ಕೈಕೆಳಗೆ ಆತ ಸಾಮಾನ್ಯ ಗುಮಾಸ್ತ. ಯಥಾಪ್ರಕಾರ ವೃತ್ತಿನಿಷ್ಠೆ, ಮನೆಯಲ್ಲಿ ಮಾತ್ರ ನಲ್ಲ–ನಲ್ಲೆಯರು.... ಇತ್ಯಾದಿ. ಈಗ ನಿಬಂಧನೆಗಳನ್ನು ತ್ಯಜಿಸಿ, ಆಕೆ ಗರ್ಭಿಣಿ....... ಗಂಡುಮಗುವಿನ ತಾಯಿ. ಕಛೇರಿಗೆ ಹೋಗುವುದು ಅನಿವಾರ್ಯವಾದ್ದರಿಂದ ಮಗುವನ್ನು ಬೇಬಿಸಿಟ್ಟಿಂಗ್‌ನಲ್ಲಿ ಬಿಡುವುದು ಅನಿವಾರ್ಯ. ಆದರೆ ಚಿತ್ರದಲ್ಲಿ ಇಲ್ಲಿಂದಲೇ ತೊಂದರೆಗಳಿಗೆ ಆರಂಭ. ತಾಯಿಯಾದ ಮೇಲೆ ಮಗುವನ್ನು ನೋಡಿಕೊಳ್ಳುವುದಕ್ಕಿಂತ ಬೇರೆ ಕೆಲಸ ಮುಖ್ಯ ಅಲ್ಲ. ಮತ್ತು ಮಗುವನ್ನು ಬೇಬಿಸಿಟ್ಟಿಂಗ್‌ನಲ್ಲಿ ಬಿಡುವುದಾಗಲೀ, ಅದಕ್ಕೆ ಹಾಲಿನಪುಡಿಯಿಂದ ತಯಾರಿಸಿದ ಹಾಲು, ಫೀಡಿಂಗ್ ಬಾಟಲ್ ಇತ್ಯಾದಿ ಬಹು ದೊಡ್ಡ ಅಪರಾಧ — ಇದನ್ನು ತಿಳಿದಾಗ ಖಿನ್ನನಾಗುವ ಪತಿದೇವ. ಇವೆಲ್ಲ ಸಮಸ್ಯೆಗಳು ಇರುತ್ತವೆಂದು ಗಂಡನಿಗೆ ಮೊದಲೇ ತಿಳಿಯದೆ, ಇದರಲ್ಲಿ ಅಚ್ಚರಿಗಳಾದರೂ ಏನು? ಇಂಥ ಚಿತ್ರ ನೋಡಿದ ಉದ್ಯೋಗಸ್ಥ ಮಹಿಳೆಯರು ಬೇಬಿಸಿಟ್ಟಿಂಗ್‌ನಲ್ಲಿ ಮಕ್ಕಳನ್ನು ಬಿಡುವವರು ನಿಜಕ್ಕೂ ತುಂಬ ಅಪಮಾನಿತರಾಗುವಂತೆ ಚಿತ್ರಿಸಲಾಗಿದೆ. ನಮ್ಮಲ್ಲಿ ಇನ್ನು ಬೇಬಿಸಿಟ್ಟಿಂಗ್ ಇತ್ಯಾದಿಗಳ ಅಗತ್ಯದ ಬಗ್ಗೆ ಸಾಕಷ್ಟು ಅರಿವು ಮೂಡಿಲ್ಲ. ಇನ್ನೂ ಮಕ್ಕಳು ತಾಯಿಯ ವಾತ್ಸಲ್ಯ ಇತ್ಯಾದಿ ಭಾವನಾತ್ಮಕ ನೆಲೆಗಳಿಂದ ಬಿಡಿಸಿಕೊಂಡು ವಾಸ್ತವಕ್ಕೆ ಒಗ್ಗಿಕೊಳ್ಳುವುದು ಸಾಧ್ಯವಾಗಿಲ್ಲ. ಹೀಗಿರುವಾಗ ಅನುಕೂಲಗಳನ್ನು ಅಗತ್ಯಗಳನ್ನು ಅರ್ಥೈಸುವ ಬದಲು ತದ್ವಿರುದ್ಧವಾದ ಪ್ರತಿಪಾದನೆಯಾದಾಗ ಮನಸ್ಸುಗಳು ಖಿನ್ನವಾಗುತ್ತವೆ. ನಿರ್ಧಾರಗಳು ಡೋಲಾಯಮಾನವಾಗಿ ತತ್ತರಿಸಬೇಕಾಗುತ್ತದೆ. ಈ ಹೊತ್ತು ಮಹಿಳೆ ಸ್ವಾವಲಂಬನೆಗೆ — ಮುಖ್ಯವಾಗಿ ಈ ದಿನಗಳಲ್ಲಿ ಆರ್ಥಿಕ ಸ್ಥಿರತೆ ಎಲ್ಲ ಕುಟುಂಬಕ್ಕೂ ಅಗತ್ಯವಿರುವಾಗ ಆಕೆ ದುಡಿಯುವುದು ಅನಿವಾರ್ಯ. ಇದಕ್ಕಾಗಿ ಕೆಲವು ವರ್ಷಗಳಾದರೂ ಬೇಕು. ಈ ಹಿನ್ನೆಲೆಯಲ್ಲಿ ಈಗೀಗ ರೂಢಿಗೆ ಬರುತ್ತಿರುವ ಶಿಶುಕೇಂದ್ರಗಳನ್ನು ಬಳಸುವಲ್ಲಿ ಕುಟುಂಬದವರ ಮನಸ್ಸನ್ನು ಒಲಿಸಬೇಕಾಗಿದೆ, ಅದಕ್ಕೆ ತದ್ವಿರುದ್ಧವಾದಾಗ ಎಲ್ಲ ಹೆಣ್ಣುಮಕ್ಕಳೂ ದುಡಿಯದೆ ಕೂತು ಮಕ್ಕಳ ಲಾಲನೆ ಪಾಲನೆ ಮಾಡಬೇಕೆಂಬ ವಿಚಾರವೇ ಆದರೆ ಆರ್ಥಿಕ ಸಮತೋಲವಾದರೂ

ಹೇಗೆ ಸ್ಥಾಪಿತವಾದೀತು......................

ಆಕೆ ದೊಡ್ಡ ಅಧಿಕಾರಿಯಾದ್ದರಿಂದ ಆಕೆಗಾಗಿ ದೊಡ್ಡ ಬಂಗಲೆ - ಕಾರು ಇತ್ಯಾದಿ ಲಭಿಸುತ್ತವೆ. ಎಂದೂ ತನಗಿಂತ ತನ್ನ ಮಡದಿಯ ಸ್ಥಾನಮಾನ ಏರಿದರೆ ಸಹಿಸದ "ಗಂಡ" ರುಗಳಷ್ಟೇ............... ಇಲ್ಲೂ ಅದೇ ಪ್ರತಿಪಾದನೆ, ಅಸಹಕಾರ....ಅದಕ್ಕೆ ಸರಿ ಹೊಂದುವಂಥ ಸನ್ನಿವೇಶಗಳು........

ವಿದೇಶದಿಂದ ಬಂದಿಳಿದ ಕಂಪನಿ ಮಾಲೀಕನ ಮಗನೊಂದಿಗೆ ಆಕೆಯ ಸಂಬಂಧವೆಂಬ ಸಂಶಯಗಳು ಅದನ್ನು ನಂಬುವ ಗಂಡ.......ಹೀಗೆ ಇನ್ನೊಂದು ದಿಕ್ಕಿನಲ್ಲಿ ದುಡಿಯುವ ಹೆಣ್ಣುಗಳ ಬಗ್ಗೆ ಏಳುವ ಮಾಮೂಲೀ ಆರೋಪಗಳು ಪ್ರತಿ ಹಂತದಲ್ಲೂ ಆಕೆಯ ಬದುಕು ಅಸಹನೀಯ ಮಾಡುವಂಥ ಪರಿಸರ.

ಒಮ್ಮೆ ಆಕೆ ಯಾವುದೇ ಗಂಭೀರವಾದ ಸಮಸ್ಯೆಯನ್ನು ಚರ್ಚಿಸುವ ಸಭೆಯಲ್ಲಿದ್ದಾಳೆ. ಬೇಬಿ ಸಿಟ್ಟಿಂಗ್ ನಲ್ಲಿದ್ದ ಮಗುವಿಗೆ ಆರೋಗ್ಯ ಸರಿ ಇಲ್ಲ ಎಂದು ಸುದ್ದಿ ಕೊಡಲು ಫೋನ್ ಕರೆ, ಆಕೆಯುವರೆಗೆ ಆ ಸುದ್ದಿ ತಲುಪುವುದಿಲ್ಲ. ತುಂಬ ಕಾನ್‌ಫಿಡೆನ್ಸಿಯಲ್ ಮೀಟಿಂಗ್ ಆದ್ದರಿಂದ ಆಕೆಗೆ ಫೋನ್ ಕೊಡುವುದಿಲ್ಲ. ಆದರೆ ಆತನಿಗೆ ಸುದ್ದಿ ತಿಳಿದು ಹೋಗಿ ಮಗುವನ್ನು ಆಸ್ಪತ್ರೆಗೆ ಕರೆದೊಯ್ಯುತ್ತಾನೆ. ಅಲ್ಲಿಯ ವೈದ್ಯರು ಮಗುವಿಗೆ ಚಿಕಿತ್ಸೆ ಕೊಡುವುದಕ್ಕಿಂತ ಮುಖ್ಯವಾಗಿ "ತಾಯಿಯ ಹಾಲು ಇಲ್ಲ ತಾಯಿಯ ಪ್ರೀತಿ ಇಲ್ಲ" ಇತ್ಯಾದಿಯಾದ ಅನಗತ್ಯ ಭಾಷಣ ಬಿಗಿಯುತ್ತಾನೆ. ಆಕೆ ಮನೆಗೆ ಬರುತ್ತಾಳೆ. ಆವರೆಗೆ ಮಗುವನ್ನು ನೋಡಿಕೊಂಡಿದ್ದ ಮನೆಗೆಲಸದ ಹೆಂಗಸು ಮಗುವನ್ನು ಗಂಡನ ಕೈಗೆ ಕೊಟ್ಟು ತಾನು ತನ್ನ ಮನೆಗೆ ಹೋಗಬೇಕೆಂದೂ ತನ್ನ ಮಕ್ಕಳಿಗೆ ಆಹಾರಕೊಡಲು ವೇಳೆ ಆಯಿತೆಂದು ಹೇಳಿ ಹೊರಟಿದ್ದಾಳೆ. ಇಲ್ಲಿ ಪದೇ ಪದೇ ಮನೆಗೆಲಸದ ಹೆಂಗಸಿನ ಬಾಯಲ್ಲಿ ಇಂಥ ಮಾತುಗಳನ್ನು ಹೇಳಿಸುತ್ತ ಮನೆಯೊಡತಿ ಕರ್ತವ್ಯ ಭ್ರಷ್ಟಳು, ಮನೆಗೆಲಸದ ಹೆಂಗಸಿಗೆ ತಿಳಿದಷ್ಟು ಅರಿವಿಲ್ಲದ ಮೂರ್ಖಳು ಎಂಬಂತೆ ಚಿತ್ರಿಸಲಾಗುತ್ತದೆ. ಮನೆಗೆ ಬಂದ ಹೆಂಡತಿಗೆ ಆಯಾಸ.......ತನ್ನ ಹತ್ತಿರ ಬಂದ ಮಗುವನ್ನು ಮತ್ತೆ ಗಂಡನ ಬಳಿ ಕೊಟ್ಟು ಮುಖ ತೊಳೆದು ಆಯಾಸ ಪರಿಹರಿಸಿಕೊಳ್ಳುತ್ತ ಕಾಫಿಗಾಗಿ ಚಡಪಡಿಸಿ, ಮನೆಗೆಲಸದವಳಿಲ್ಲವಾದ್ದರಿಂದ, "ಕೊಂಚ ಕಾಫಿ ಬೆರೆಸಿ ತರುತ್ತೀರಾ ತುಂಬ ಆಯಾಸ ಆಗಿದೆ," ಎಂದ ಹೆಂಡತಿ ಗಂಡನ ಕೈಲಿ ದುಡಿಸಿಕೊಳ್ಳುವ (ಸೇವೆ!) ಧೂರ್ತೆಯ ಹಾಗೆ ಪ್ರೇಕ್ಷಕನಿಗೆ ಕಾಣುತ್ತಾಳೆ ಗಂಡ ಮಾತ್ರ ಆದರ್ಶವಾದ ಪತಿ ಅತ್ಯಂತ ಸಹನೆಯುಳ್ಳವನು!

ತೀರಾ ನಷ್ಟದಲ್ಲಿದ್ದ ಕಂಪನಿಯನ್ನು ಸುಧಾರಿಸಿ ಲಾಭದಾಯಕವಾಗಿಸಿದ ಕೀರ್ತಿ ಆಕೆಗೆ. ಅಂತೇ ಕೆಲವು ತುರ್ತು ಕಾರಣಗಳಿಂದಾಗಿ ವಿದೇಶಕ್ಕೆ ತೆರಳಬೇಕು. ಆದರೆ ಆತನಿಗೆ ಇಷ್ಟವಿಲ್ಲ. ಮಗುವಿಗೆ ಆರೋಗ್ಯ ಸರಿ ಇಲ್ಲದಾಗ ಹೋಗಬೇಕಿಲ್ಲ ಎಂಬ ವಾದ. ಆಕೆ ವೃತ್ತಿಯ ನಿಷ್ಠೆಗೆ ಮಹತ್ವ ನೀಡಿ ಹೊರಟು ಬಿಡುತ್ತಾಳೆ. ಇಲ್ಲಿಂದ ಗಂಡ – ಹೆಂಡಿರ ನಡುವಿನ ಬಿರುಕು ಮತ್ತಷ್ಟು ದೊಡ್ಡದಾಯಿತು. ಪ್ರೇಕ್ಷಕರ ಕಣ್ಣಲ್ಲಿ ಆಕೆ ಮಹಾದುಷ್ಟ ಹೆಂಗಸು. ಆಕೆ ಎಂತಲೇ ಅಲ್ಲ ದುಡಿಯುವ ಮಹಿಳೆಯರೆಲ್ಲ ದುಷ್ಟರೇ ಎನ್ನಬಹುದು.

ಆಕೆ ವಿದೇಶದಿಂದ ೪ ದಿನದ ನಂತರ ಹಿಂತಿರುಗಿ ಬಂದಾಗ ಮೊದಲು ಹೋದದ್ದು ಬೇಬಿಸಿಟ್ಟಿಂಗ್ ಕೇಂದ್ರಕ್ಕೆ. ಮಗು ಇಲ್ಲ. ಮನೆಯಲ್ಲೂ ಇಲ್ಲ. ಆಕೆಗೆ ಆಶಂಕ. ಗಂಡನನ್ನು ಸಂಧಿಸಿ ಕೇಳಿದಾಗ ಆತ ತೀರಾ ನಿಷ್ಠುರವಾಗಿ ಮಾತಾಡಿ ಸಮಾಧಿಯೊಂದನ್ನು ತೋರಿಸಿ ಮಗು ಸತ್ತು ಹೋಯಿತೆಂದೂ, ಹಾಗೆ ತನ್ನ ಮಗುವನ್ನು ನಿರ್ಲಕ್ಷಿಸಿ, ಮಾಲೀಕರ ಮಗನೊಡನೆ ವಿದೇಶಕ್ಕೆ ತೆರಳಿದ ಆಕೆಯನ್ನು ಆತ ಒಲ್ಲನೆಂದೂ ನಿಷ್ಠುರಮಾಡಿ ಹೊರಟು ಬಿಡುತ್ತಾನೆ.

ಆಕೆಗೀಗ ತವರು ಮನೆಯೇ ಗತಿ. ಆತನಿಂದ ವಿಚ್ಛೇದನದ ಕೋರಿಕೆ. ನ್ಯಾಯಾಲಯದಲ್ಲಿ ವಾದ-ಪ್ರತಿವಾದ, ಅಂತೂ ಅವರಿಬ್ಬರೂ ಬೇರೆಯಾದರು. ಮುಂದೆ ಆಕೆಯ ಉದ್ಯೋಗ, ಇತ್ಯಾದಿ ವಿವರ ಇಲ್ಲ. ಆಕೆ ತಾಯಿ–ತಂದೆಯ ಬಳಿ ಇದ್ದಾಳೆ. ಆಕೆಗೊಬ್ಬ ತಂಗಿ—ತಮ್ಮ. ತಮ್ಮನು ಲಾಯರ್, ತಂಗಿಯ ಮದುವೆ ಮಾತು ಬಂದಾಗೆಲ್ಲ ಅಕ್ಕ ಹೀಗೆ

ವಿಚ್ಛೇದಿತೆ ಎಂಬುದನ್ನು ತಿಳಿದಾಗ ಒಲ್ಲೆನೆಂದು ಎದ್ದು ಹೋದ ಸಂಬಂಧಗಳು. ವಿಚ್ಛೇದನವಾದ ಸಮಯದಲ್ಲಿ ಗರ್ಭಿಣಿಯಾಗಿದ್ದ ಆಕೆಗೆ ಒಂದು ಹೆಣ್ಣು ಮಗು ಇದೆ. ಅದು ಸಹಾ ತಂದೆಯನ್ನು ಕೇಳುತ್ತದೆ. ಸತ್ಯ ಹೇಳದೆ ತಂದೆ ವಿದೇಶದಲ್ಲಿದ್ದಾರೆಂದು ಸಬೂಬು ಹೇಳುವ ತಾಯಿ. ಪ್ರೇಕ್ಷಕನಿಗೆ ಆಕೆ ತನ್ನ ಮೇಲಧಿಕಾರಿಯನ್ನು ವಿವಾಹವಾಗಿ ಮಗು ಪಡೆದಿರಬಹುದೆಂಬ ಸಂದೇಹ. ಹೀಗೆ ತಪ್ಪುಗ್ರಹಿಕೆಗಳಿಗೇ ಸೃಷ್ಟಿಸಲಾದ ಸನ್ನಿವೇಶಗಳಿವೆ.

ಅದೇ ಊರಿನಲ್ಲಿರುವ ಒಂದೇ ಶಾಲೆಗೆ ಆತ–ಆಕೆ ತಮ್ಮ ಮಕ್ಕಳನ್ನು ಕಳಿಸಲು ಬಂದಾಗ ಮುಖಾಮುಖಿ ಆಗುತ್ತಾರೆ.

ಇಬ್ಬರೂ ಬೇರೆ ಮದುವೆ ಆಗಿ ಮಕ್ಕಳನ್ನು ಪಡೆದಿರಬಹುದೆಂದು ಪರಸ್ಪರರ ಬಗ್ಗೆ ಅಂದುಕೊಂಡು ಮುಖ ತಿರುಗಿಸಿ ನಡೆಯುವುದು. ಆಕೆಯ ಮಗಳು–ಆತನ ಮಗ ಶಾಲೆಯಲ್ಲಿ ಗೆಳೆಯರು. ಮಗನಿಗೆ ಆತ ನಿನ್ನ ತಾಯಿ ಸತ್ತಿದ್ದಾಳೆಂದು ಹೇಳಿದ್ದಾನೆ. ಶಾಲೆಯಲ್ಲಿ ವಾರ್ಷಿಕೋತ್ಸವ. ಜಾಣ ಮಕ್ಕಳು ತಂದೆ–ತಾಯಿಯರಿಗೂ ಪ್ರಶಸ್ತಿ. ಮಕ್ಕಳೇ ಆಡುವ ನಾಟಕ. ಅಲ್ಲಿ ಮತ್ತೆ ಈ ತಂದೆ — ತಾಯಿಗೆ ಎಮೋಷನಲ್ ಬ್ಲ್ಯಾಕ್ ಮೈಲಿಂಗ್ .... ಹೀಗೆ ಘಟನೆಗಳ ಸರಮಾಲೆ.

ಒಂದು ಹಂತದಲ್ಲಿ ಆಕೆಯ ಮಗಳಿಗೆ ತಾಯಿ ವಿವಾಹ ವಿಚ್ಛೇದನ ಪಡೆದಿದ್ದಾಳೆ, ತನ್ನ ತಂದೆ ವಿದೇಶದಲ್ಲಿಲ್ಲ ಎಂಬ ಸತ್ಯ ತಿಳಿದಾಗ ಪರಿಣಾಮ ವಿಚಿತ್ರವಾಗುತ್ತದೆ. ಆ ಮಗುವಿಗೆ ಸೋದರಮಾವನ ಕುಮ್ಮಕ್ಕು. ಆ ಬಾಲಕಿಯಿಂದ ಲಾಯರ್ ನೋಟೀಸ್. (ಆತನಿಗೂ ನೋಟೀಸ್ ಹೋಗಿದೆ. ತಂದೆ ಯಾರೆಂದು ತಿಳಿಯದ ಹುಡುಗಿ ಹೇಗೆ ಕಳಿಸಿದಳು.... ಇತ್ಯಾದಿ ತರ್ಕಕ್ಕೂ ಇಲ್ಲಿ ಅವಕಾಶ ಇಲ್ಲ!) ಸೋದರ ಮಾವನೊಟ್ಟಿಗೆ ನ್ಯಾಯಾಧೀಶರ ಮನೆಗೆ ಹೋಗಿ, “ನೀವು ಹೇಗೆ ವಿಚ್ಛೇದನದ ತೀರ್ಪು ನೀಡಿದಿರಿ” ಎಂದು ದಬಾಯಿಸುವ ಪುಟ್ಟ ಬಾಲೆ.

“ಅಯ್ಯೋ! ನನ್ನ ಮನೇಲೂ ಒಂದು ಇಂಥ ಪ್ರಸಂಗ ಇದೆ. ಕಾನೂನಿನಲ್ಲಿ ಈ ವಿಚ್ಛೇದನದ ಅವಕಾಶವೇ ಇರಬಾರದು. ಅದನ್ನು ಕಿತ್ತೊಗೆಯಬೇಕು” ನ್ಯಾಯಾಧೀಶನ ಹೇಳಿಕೆ. ಇಲ್ಲಿಗೆ ಇತಿಶ್ರೀ ಆದಂತೆ. ನ್ಯಾಯಾಧೀಶನೊಬ್ಬನ ಬಾಯಲ್ಲಿ ಹೀಗೆ ಹೇಳಿಸಿ ವಿಚ್ಛೇದನಾವಕಾಶದ ವಿರುದ್ಧ ಮಾತಾಡಿಸುವ ನಿರ್ದೇಶಕರಿಗೆ ಏನು ಹೇಳೋಣ? ಇದರ ಪರಿಣಾಮ ಏನಾಗಬಹುದು?

ಅತ್ತ ತಾಯಿಯ ಬಳಿ, “ನಿನಗೆ ಗಂಡ ಬೇಡವಾದರೇನಂತೆ. ನನಗೆ ತಂದೆ ಬೇಕು. ನೀನು ಮಾಡಿದ್ದು ತಪ್ಪು” ಎಂದು ದಬಾಯಿಸುವ ಮಗಳು. ಪುಟ್ಟ ಹುಡುಗಿಯ ಬಾಯಲ್ಲಿ ಈ ಮಾತು! ಕಡೆಗೆ ತಂದೆ ಬೇಕೆಂದು ಆಕೆಯ ನಿರಶನ ವ್ರತ–ಇತ್ಯಾದಿ. ತಾಯಿಯ ಸಂದಿಗ್ಧ ಪರಿಸ್ಥಿತಿ, ಸಿಟ್ಟು, ದುಃಖ ಇತ್ಯಾದಿ.

ಅತ್ತ ಆಕೆಯೇ ತನ್ನ ತಾಯಿ, ಆಕೆ ಸತ್ತಿಲ್ಲ. ತಂದೆ ಹೇಳಿದ್ದು ಸುಳ್ಳು. ತಾಯಿಗೆ ಮಗ ಸತ್ತಿದ್ದಾನೆಂದು ಹೇಳಿ ವಿಚ್ಛೇದನ ಪಡೆದು ತಂದೆಯೇ ಸಾಕುತ್ತಿದ್ದಾನೆ ಇವೆಲ್ಲ ತಿಳಿದ ಗಂಡುಮಗು ಧಾವಿಸಿ ತಾಯಿಯ ಬಳಿ ಬಂದು ಆಕೆ ನಿರಾಕರಿಸಿದರೂ ಕೇಳದೆ ಸತ್ಯವನ್ನು ಹೇಳಿ ತನ್ನ ಆವರೆಗಿನ ಗೆಳತಿ ಸಹೋದರಿ ಎಂದು ತಿಳಿದಾಗ ಆಕೆಯತ್ತ ಧಾವಿಸುತ್ತದೆ.

ಅತ್ತ ಹೆತ್ತವರು ಆತನ ಬಳಿ ತೆರಳಿ, “ಕ್ಷಮಿಸಿ, ಮನೆಗೆ ಬನ್ನಿ. ಆಕೆಯನ್ನು ಸ್ವೀಕರಿಸಿರಿ. ನ್ಯಾಯಾಲಯದ ತೀರ್ಪು ಬೇರೆ, ಸಮಾಜದ ರೀತಿ, ರಿವಾಜು ಬೇರೆ” ಎಂದು ದುಂಬಾಲು ಬೀಳುತ್ತಾರೆ.

ಆತನ ಒರಟು ಮಾತು, ಆಕೆಯ ಶೀಲದ ಬಗ್ಗೆ ಕಟಕಿ. ಆದರೆ ಆಕೆ ನಿಜಕ್ಕೂ ಅಪರಾಧಿಯಲ್ಲ. ಆ ಹೆಣ್ಣುಮಗು ಅವನದ್ದೇ ಎಂಬಂಶ ಮನವರಿಕೆ ಆದ ಮೇಲೆ ಆತನೂ ಹಿಂತಿರುಗಿ ಬಂದು ಕ್ಷಮೆ ಕೇಳಿ, ಗಂಡ–ಹೆಂಡತಿ ಮಕ್ಕಳು ಒಂದಾಗುತ್ತಾರೆ. ಅಡುಗೂಲಜ್ಜಿ ಕತೆಯ ಹಾಗೆ ಕೊನೆಗೆ ಎಲ್ಲರೂ ಸುಖವಾಗಿದ್ದರು .... ಅಂತ.

ಇಷ್ಟು ಸರಳವಾಗಿ ವಿವರಗಳನ್ನು ಹೇಳುವ

ಉದ್ದೇಶವೆಂದರೆ ಈ ಎಲ್ಲ ಹಂತದಲ್ಲೂ ಹೆಂಗಸಿಗೆ ಆಗುವ ಅಪಮಾನ. ವಿಶಿಷ್ಟವಾದ ಸಂಭಾಷಣೆಗಳು, ವರ್ಣನೆ, ಪ್ರೇಕ್ಷಕರು ಉದ್ದಕ್ಕೂ ಅಂಥ ಮಾತುಗಳಿಗೆ ಚಪ್ಪಾಳೆ, ಶಿಳ್ಳೆಗಳ ಸ್ವಾಗತಮಾಡುವ ಬಗೆ.

ಚಿತ್ರದ ಮತ್ತಿತರ ದೋಷಗಳು ಇಲ್ಲಿ ಅಮುಖ್ಯ. ಯಾವುದೇ ದುಡಿಯುವ ಹೆಣ್ಣು-ಗಂಡನಿಗಿಂತ ತುಸು ಹೆಚ್ಚು ಓದಿ, ದೊಡ್ಡ ಹುದ್ದೆಯಲ್ಲಿದ್ದ ಹೆಣ್ಣು, — ಮಕ್ಕಳನ್ನು ಶಿಶುಕೇಂದ್ರಗಳಿಗೆ ಕಳಿಸುತ್ತಿರುವವರು, ಎದೆ ಹಾಲು ಕೊಡಲಾಗದ ತಾಯಂದಿರು, ವಿಚ್ಛೇದನ ಪಡೆದ ಹೆಂಗಸರು, ಅವರಿರುವ ಮನೆಗಳಲ್ಲಿ ಅವಿವಾಹಿತ ತಂಗಿಯರೂ ಇದ್ದವರು, ... ವಿಚ್ಛೇದಿತರಾಗಿ ಮಕ್ಕಳನ್ನು ಬಳಿ ಇರಿಸಿಕೊಂಡವರು, ಮತ್ತು ಅಂಥ ಮಕ್ಕಳು. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಸಾಕಷ್ಟು ಸಿಗುತ್ತದೆ. ಇಂಥವರೆಲ್ಲ ಸಿನಿಮಾ ನೋಡಿದಾಗ ಮಾನಸಿಕವಾಗಿ ಏರ್ಪಡುವ ವ್ಯಥೆ, ಅಪಮಾನ, ಸಂಕೋಚಗಳು ಅವರ ಜೀವನದಲ್ಲಿ ಹೇಗೆ ಪರಿಣಾಮ ಬೀರುತ್ತವೆ, ತನ್ನ ಜೊತೆಗಿದ್ದವರೊಡನೆ ಚಿತ್ರ ನೋಡಿದಾಗ ಅವರು ಹೇಗೆ ಸಂಕೋಚದಿಂದ ಕುಗ್ಗಿ ಹೋಗುತ್ತಾರೆ. ಇಂಥ ಅಂಶಗಳು ನಾವು ಗ್ರಹಿಸಬೇಕಾದವುಗಳು. ಇಂಥ ಪ್ರಯತ್ನಗಳ ಅಪಾಯ ಗಮನಿಸಿ ವಿರೋಧಿಸದೇ ಹೋದರೆ ನಿರ್ಲಕ್ಷ್ಯ ಮಾಡಿದರೆ ನಿಜಕ್ಕೂ ಅರಳಬೇಕಾದ ಮನಸ್ಸುಗಳನ್ನು ಮುದುಡಿಸಿ, ಧೈರ್ಯ ತುಂಬಬೇಕಾದ, ಸಮಸ್ಯೆ ಎದುರಿಸಲು ಸಿದ್ಧಗೊಳಿಸಬೇಕಾದ ಮನಸ್ಸುಗಳನ್ನು ಸಮಾಧಿ ಮಾಡುತ್ತವೆ ಇಂಥ ಧೋರಣೆಗಳು.

ಇತ್ತೀಚೆಗೆ ಸುಧಾರಣೆಯ ಹೆಸರಲ್ಲಿ ಬರುತ್ತಿರುವ ಈ ಕಳಪೆ ಚಿತ್ರಗಳನ್ನು ಎಷ್ಟು ಜನ ವಿರೋಧಿಸುತ್ತಾರೆ ಹೇಗೆ ಇದನ್ನು ನಿವಾರಿಸಬಹುದು? ನಾವು ಅಶ್ಲೀಲ ಚಿತ್ರಗಳಿಗೆ ಭಿತ್ತಿಚಿತ್ರಗಳಿಗೆ ಸಂಭಾಷಣೆ ತೋರಿಸುವ ವಿರೋಧವೇ ಪ್ರಗತಿಯಲ್ಲ: ಪ್ರತಿಭಟನೆ ಅಲ್ಲ.

ನಮ್ಮ ವಿರೋಧ ಇನ್ನೂ ಈ ಮೌಲ್ಯಗಳ ಪ್ರತಿಪಾದನೆಯಿಂದ ಬೇರೆ ಬೇರೆ ಅಂಶಗಳತ್ತ ಮುಖ ಮಾಡದೇ ಹೋದರೆ ಬದುಕು ಅಸಹನೀಯವಾಗುತ್ತದೆ. ನೈತಿಕ ಧೈರ್ಯ ಕುಸಿಯುತ್ತದೆ. ನಮಗೆ ಬೇಕಾದ ಮೌಲ್ಯಗಳು ಯಾವುವು? ನಿಯಂತ್ರಿಸಿ, ನಿರ್ಧರಿಸುವ ಜವಾಬ್ದಾರಿ ಯಾರದು?

0 0 0 0

ಬೆಡಗಿನ ಓಟಗಾರ್ತಿ: ಅಶ್ವಿನಿ


ಇತ್ತೀಚೆಗೆ ಅರ್ಜುನ ಪ್ರಶಸ್ತಿ ಪಡೆದ ಅಶ್ವಿನಿ ಓಡಲು ಶುರುಮಾಡಿದ್ದು ಬಹಳ ಸಣ್ಣ ವಯಸ್ಸಿಗೆ. ಅಮ್ಮಕೊಡುವ ಚಾಕೋಲೇಟ್ ಬಹುಮಾನಕ್ಕೆ ಸ್ಟೇಡಿಯಂ ಅನ್ನು ಒಂದು ಸುತ್ತು ಓಡುತ್ತಿದ್ದಳು. ಈಗ ಓಟದ ರಾಣಿ ಪಿ. ಟಿ. ಉಷಾಗೆ ಪೈಪೋಟಿಯಾಗಿದ್ದಾಳೆ. 89 ರ ನವೆಂಬರ್‌ನಲ್ಲಿ ನಡೆದ ಏಷ್ಯಾದ ಟ್ರ್ಯಾಕ್ ಮತ್ತು ಫೀಲ್ಡ್ ಕೂಟದ 200 ಮೀಟರ್ಸ್ ಓಟದಲ್ಲಿ ಉಷಾ 23.27 ಸೆಕೆಂಡ್‌ನಲ್ಲಿ ಓಡಿ ಚಿನ್ನದ ಪದಕ ಪಡೆದರೆ, ಅಶ್ವಿನಿ 23.54 ಸೆಕೆಂಡ್‌ನಲ್ಲಿ ಓಡಿ ಬೆಳ್ಳಿ ಪದಕ ಪಡೆದಳು. ನಡುವಿನ ಅಂತರ ಕೇವಲ 0.27 ಸೆಕೆಂಡ್, ಇತ್ತೀಚೆಗಷ್ಟೇ ನಡೆದ 29 ನೇ ರಾಷ್ಟ್ರೀಯ ಅಥ್ಲೆಟಿಕ್ ಛಾಂಪಿಯನ್ ಷಿಪ್ಸ್‌ನ 200 ಮೀ ಓಟದಲ್ಲಿ ಉಷಾಳನ್ನು ಹಿಂದೆ ಹಾಕಿ ಚಿನ್ನದ ಪದಕ ಪಡೆದಳು.

ಸೋಲ್ ಒಲಂಪಿಕ್ಸ್‌ನ ಲಾಂಗ್ ಜಂಪಿನಲ್ಲಿ 6 ನೇ ಸ್ಥಾನ ಪಡೆದಿದ್ದ ಅಶ್ವಿನಿ ಈಗ ಓಟದ ಮೇಲೆ ಹೆಚ್ಚು ಗಮನ ನೀಡುತ್ತಿದ್ದಾಳೆ.

ತಾನು ಸ್ವಲ್ಪ ಎತ್ತರವಿದ್ದಿದ್ದರೆ ಇನ್ನು ಹೆಚ್ಚು ಸಾಧಿಸಬಹುದಿತ್ತು, ಎನ್ನುವ ಅಶ್ವಿನಿ ಪ್ರಯತ್ನದಲ್ಲಿ ನಂಬಿಕೆ ಇಟ್ಟವಳು, ಮುಂಬರುವ ಏಷ್ಯನ್ ಕ್ರೀಡೆಯಲ್ಲಿ ಈಕೆಯಿಂದ ಪದಕ ನಿರೀಕ್ಷಿಸಬಹುದು.

ಗಂಡ – ಗಂಡು ವಿಚಾರ

ಗಂಡನ್ನ ಪಡೆದವರೆ
ಗಂಡು ಹಡೆದವರೆ
ಗಂಡನ್ನ ಮೆದ್ದವರೆ
ಗಂಡನ್ನ ಕದ್ದವರೆ
ಗಂಡೀನ ಹುಚ್ಚುಗೆದ್ದವರೆ
ಗಂಡಾಗಿ ಮ್ಯಾಲೆ ಎದ್ದವರೆ



ಗಂಡಾ ಗಂಡು ವಿಚಾರ
ಉಂಡ ಮ್ಯಾಲಿರಬೇಕು,
ವಿಷ ಉಂಡ ಶಿವ ನಕ್ಹಾಂಗ
ಕತ್ತಲುಂಡ ಬೆಳಕಾಂಗ,
ತಿಳಿವು ಕಣ್ಣಾಗದೆ
ಕಾಯಿ ಹಣ್ಣಾಗದೆ ಮಾತು
ಒಳಗೆ ಗಂಡಾಗುವದಿಲ್ಲ

ಕಟ್ಟ್ಯಾಕ ಕಥಿಯಲ್ಲಾ
ಮೆಟ್ಟ್ಯಾಕ ಚೋಳಲ್ಲಾ
ಹುಟ್ಟ್ಯಾತ ಬೆನ್ನ ಹತ್ತ್ಯೈತಿ ಗಂಡ ವಿಚಾರ
ಧೇವ್ರಾಗಿ ದೆವ್ವಾಗಿ ದೇಹ ಸಂಚಾರ
ಮುನಕಂಡ ಮಾತ್ಯೈತಿ
ಜನಕಂಡ ನೀಕ್ಯೈತಿ
ಎಲ್ಲಾ ಮನ್ಯಾನ್ನ ದ್ವಾಸಿಗೂ ತೂತ!
ಎಲ್ಲಾ ಗಂಡರದ್ಯೈತಿ ಬಂದ ಮಾತ!

ಆದ್ರೂ ಗಂಡ
ಒಬ್ಬ್ರೊರಿಗೆ ಹತ್ತಿದ ಲಾಟರಿ
ಇನ್ನೊಬ್ಬರಿಗೆ ಮೇಣಸು ಖಾತರಿ
ಮತ್ತಷ್ಟು ಮಂದಿಗೆ ಗಂಡ ಮುಂಡರಿ
ಭಾಳಷ್ಟು ಮಂದಿಗೆ ಹಂಡಾ ಬಂಡಾರಿ

ಗಂಡು

ಒಂದೊಂದು ಕನಸಿಗೆ ಮುಗಿಲ ನಕ್ಷತ್ರ
ಕೆಲವೊಂದು ಹಣ್ಯಾಗ ಖಾಸಾ ಮಿತ್ರ
ಕುಣಿಸುವ ಕಣ್ಣೀಗೆ ಕಾಮಸೂತ್ರ
ಎಷ್ಟೋ ಕೈಮ್ಯಾಗ ವಿಷದ ಪಾತ್ರ

ಗಂಡು ಆಗದ ಗಂಡ್ರು ಬಹುತೇಕ
ಗಂಡಾ ಆಗದ ಗಂಡಸರೂ ಆದಾರ್ರಿ
ಹೆಣ್ಣೀಗೆ ಬುದ್ಧ್ಯಾಗಿ
ಒಳಗಣ್ಣಿಗೆ ಶುದ್ಧ್ಯಾಗಿ
ತನಗ ತಾ ಗಂಡಾಗಿ
ಮನಕ ತಾ ಹೆಣ್ಣಾಗಿ
ಗಂಡುತನದ ಗಂಡ, ಗಂಡು
ಕಂಡಿದ್ರ ಶರಣೆನ್ರಿ
ಅಂಥವಗ ಶರಣೆನ್ರಿ

ಮಾಲತಿ ಪಟ್ಟಣಶೆಟ್ಟಿ

ನೆಲೆ ಕಂಡ ಬದುಕು

ವಿ. ಗಾಯತ್ರಿ

ರತ್ನಾಗೆ ಈಗ ೨೨ ವರ್ಷಗಳಿರಬಹುದು. ೨ ವರ್ಷಗಳ ಹಿಂದೆ ನಾನವಳನ್ನು ಭೇಟಿಯಾದ್ದು ನೆನಪಿದೆ — ಶಿಬಿರವೊಂದರಲ್ಲಿ. ದಪ್ಪ — ಎತ್ತರಗಳಲ್ಲಿ "ಸುಂದರಿ" ಯೆನಿಸುವಂತಹ ಹುಡುಗಿಯ ಕಣ್ಣಿನಲ್ಲಿ ಮಾತ್ರ ಮಿಂಚಿಲ್ಲ. ಅದಕ್ಕಿಂತ ಹೆಚ್ಚಾಗಿ ಸೂಸಬಲ್ಲ ಮಿಂಚಿಗೆ ಒಡ್ಡನ್ನು ಕಟ್ಟಿರುವಂತದ್ದೇನೋ ಒಂದು ನಡೆದಿದೆ. ಅವಳ ಸುಪ್ತಪ್ರಜ್ಞೆ ಅವಳಿಗೇನನ್ನೋ ಪುನಃ ಪುನಃ ನೆನಪಿಸುತ್ತಿದೆಯೆನಿಸುವಂತಹ ಶಬ್ದಗಳವು! "ನಾನು ಇನ್ನೂ ರಜಸ್ವಾಗಿಲ್ಲ ಮೇಡಂ" — ರತ್ನಾಳ ದುಗುಡಕ್ಕೆ ಇದು ಕಾರಣ. ೨೦ ವರ್ಷಗಳಾದರೂ ರತ್ನಾ ಇನ್ನೂ ಮುಟ್ಟಾಗಿಲ್ಲ. "ನೀವೇನಾದರೂ ಸಹಾಯ ಮಾಡಲಿಕ್ಕೆ ಸಾಧ್ಯಾನ ಮೇಡಂ" ನನ್ನನ್ನು ಕೇಳಹತ್ತಿದಳು.

ಲಿಂಗಾಯತ ಮಧ್ಯಮವರ್ಗ ಕುಟುಂಬದ ಹುಡುಗಿ ರತ್ನಾಗೆ ಎಸ್‌ಎಸ್‌ಎಲ್‌ಸಿಯವರೆಗೂ ಶಿಕ್ಷಣ ಸಿಕ್ಕಿದೆ. ಅವಳಿಗಿಂತ ಹೆಚ್ಚು ಓದಿದ ನೌಕರಿಯಲ್ಲಿರುವ ಹುಡುಗನನ್ನು ನೋಡಿ ಮದುವೆ ಮಾಡಬೇಕೆಂದು ತಂದೆ ತಾಯಿ ಯೋಚಿಸಿದ್ದರು. ಅದಕ್ಕೆ ತಕ್ಕ ಪ್ರತಿಷ್ಠೆ ಕೂಡ ಅವರ ಕುಟುಂಬಕ್ಕಿತ್ತು. ನೋಡಲು "ಚೆನ್ನಾಗಿ" ಇದ್ದ ರತ್ನಾಳಿಗೆ ಹದಿನಾಲ್ಕು ತುಂಬಿದಾಗ ತಂದೆ-ತಾಯಿ ಅಣ್ಣ-ಅತ್ತಿಗೆಯರ ಆತಂಕದ ಕ್ಷಣಗಳು ಪ್ರಾರಂಭವಾದದ್ದು. ಹದಿನಾರೂ ತುಂಬಿದ ರತ್ನಾ ಮುಟ್ಟಾಗದೇ ಹೋದಾಗ ಈ ನಿಟ್ಟಿನಲ್ಲಿ ಅವರ ವೈದ್ಯಕೀಯ ಸಂಬಂಧೀ ಪ್ರಯತ್ನಗಳು ಪ್ರಾರಂಭವಾದವು. ರತ್ನಾಗೆ ನಿಧಾನವಾಗಿ ತನ್ನ ಪರಿಸ್ಥಿತಿಯ ಅರಿವಾಗತೊಡಗಿತು. ತನ್ನ ಜತೆ ಹುಡುಗಿಯರು ಒಳಗಾಗುವ ಋತುಕ್ರಿಯೆಯೆನ್ನುವ ಕ್ರಿಯೆಗೆ ತಾನು ಒಳಗಾಗುತ್ತಿಲ್ಲ ಎಂಬುದು ೧೬-೧೭ ರ ನಂತರ ಅವಳನ್ನು ತೀವ್ರವಾಗಿ ಬಾಧಿಸತೊಡಗಿತು. "ತಾನು ಹುಡುಗಿಯೇ ಅಲ್ಲವಂತೆ" ಎನ್ನುವಂತಹ ಚರ್ಚೆ ಅವಳ ಸುತ್ತಲೂ ಹಬ್ಬತೊಡಗಿದಂತೆ ಅವಳ ಮಾನಸಿಕ ಹಿಂಸೆಯ ಕ್ಷಣಗಳು ಪ್ರಾರಂಭವಾದವು. ತಾನು ಅಪೂರ್ಣಳು ಎಂಬಂಶದ ಹೇರಿಕೆ ನಿರಂತರ ನಡೆಯತೊಡಗಿದಾಗ ತಾನು ಬದುಕಿದ್ದೂ ಸತ್ತಂತೆ ಎನ್ನುವ ಮನೋಭಾವ ರತ್ನಳಲ್ಲಿ ಗಾಢವಾಗತೊಡಗಿತು. ತಂದೆ-ತಾಯಿ ವೈದ್ಯಕೀಯವಾಗಿ ಮಾಡುವ ಪ್ರಯತ್ನವೆಲ್ಲಾ ನಡೆದಿತ್ತು. ರತ್ನಾಳ ದೇಹಪ್ರಕೃತಿ ಮಾತ್ರ ಋತುಕ್ರಿಯೆಗೆ ಅಣಿಲೇ ಇಲ್ಲ. ರತ್ನ ಒಂದು ನಾರ್ಮಲ್ ಹೆಣ್ಣಾಗಲು ಸಾಧ್ಯವೇ ಇಲ್ಲ ಎಂದಾದ ಮೇಲೆ ಅವಳೆಡೆಗಿನ ಸಹಜ ನಡವಳಿಕೆಗೂ ಕ್ಷಯ ಬಂತು ಕುಟುಂಬವನ್ನೂ ಒಳಗೊಂಡಂತೆ, ಎಲ್ಲದರಲ್ಲೂ ಅಸಹಜತೆ ಅಸಡ್ಡೆ ಇಲ್ಲವೇ ಅನುಕಂಪ. ಪ್ರತಿಷ್ಟಿತ ಕುಟುಂಬದ ಚಲುವೆ ರತ್ನಾಳನ್ನು ಮದುವೆಯಾಗಲು ಕಾದುಕೊಂಡಿದ್ದ ಗಂಡುಗಳು "ಹುಡುಗಿ"ಯಲ್ಲದ ಅವಳಿಂದ ದೂರ ಸರಿಯುವಂತಾಯಿತು. ಅವಳು ತೊಟ್ಟಿಲಿಗೆ ಬಿದ್ದ ದಿನದಿಂದಲೇ ಅವಳ ಮದುವೆಯನ್ನೇ ಗುರಿಯಾಗಿಟ್ಟುಕೊಂಡು ಅವಳನ್ನು ಬೆಳೆಸಿದ್ದ ತಂದೆ ತಾಯಿಗಳು ಏನೋ ಕರಾಳತೆ ತುಂಬಿಕೊಂಡಂತೆ ಖಿನ್ನರಾಗತೊಡಗಿದರು. ಎಷ್ಟಾದರೂ ಖರ್ಚಾಗಲಿ ರತ್ನ ಹೆಣ್ಣೆಂಬುದು ಸಾಬೀತಾಗಬೇಕು ಎನ್ನುವ ಹಠ ಒಂದು ಕಡೆಯಾದರೆ ವಿಜ್ಞಾನವನ್ನೂ ಕ್ಯಾರೆ ಎನ್ನದ ರತ್ನಾಳ ದೇಹ ಪ್ರಕೃತಿ ಇನ್ನೊಂದು ಕಡೆ.

ತನ್ನೆಲ್ಲ ಸವಲತ್ತುಗಳೊಂದಿಗೆ ಜತೆ ಹುಡುಗಿಯರಿಗಿಂತ ಹೆಚ್ಚಾಗಿಯೇ ವೈವಾಹಿಕ ಬದುಕಿನ ಸಿಹಿ ಕನಸುಗಳನ್ನು ಕಂಡ ರತ್ನ ತಾನು ಮುಟ್ಟಾಗಲು ಸಾಧ್ಯವೇ ಇಲ್ಲ ಮುಟ್ಟಾಗದೆ ಮದುವೆಯ ಪ್ರಶ್ನೆಯೆ ಇಲ್ಲ ಎಂಬುದನ್ನು ದೃಢಪಡಿಸಿಕೊಂಡಾಗ ತಲ್ಲಣಿಸಿ ಹೋದಳು. ತುಂಬಾ ಸಹಜವಾಗಿಯೇ ಬಂದದ್ದು ಆತ್ಯಹತ್ಯೆಯ ಆಲೋಚನೆ ತನ್ನಲ್ಲಿ ಆತ್ಮಹತ್ಯೆಯ ಆಲೋಚನೆ ಎಷ್ಟೊಂದು ತೀವ್ರವಾಗಿತ್ತೆಂದರೆ ತಾನು ಹೇಗೆ ಸಾಯದೆ ಉಳಿದೆ ಎಂಬುದು ಇಂದೂ ಅರ್ಥವಾಗದ ವಿಚಾರ! ಆದರೆ ಕ್ರಮೇಣವಾಗಿ ರನ್ನಾಳ ಭಿನ್ನ ಆಲೋಚನೆಗಳಿಗೆ ಮನೆಸಿಗುವಂತಾಯಿತು ತಾನು ಸತ್ತಂತೆ ಬದುಕಬಾರದು, ತನ್ನ ಬದುಕಿಗೂ ಒಂದು ಅರ್ಥ ಸಿಗುವಂತಾಗಬೇಕು ಎಂಬಂತಹ ಯೋಚನೆ ಸ್ಪಷ್ಟವಾಗಲು ರತ್ನ ಒಳಗೊಂಡ ಮಾನಸಿಕ ಎಕ್ಸರ್ ಸೈಜ್ ತುಂಬಾ ಕಷ್ಟಕರವಾದದ್ದು. ತನ್ನ ಬದುಕು ತನ್ನ ಜತೆಯವರ ರೀತಿಯ "ಸಹಜ" ಬದುಕಲ್ಲ

ಎನ್ನುವ ಆಲೋಚನೆಗೆ ಹೊಂದಿಕೊಳ್ಳಲು, ಈ ಸತ್ಯವನ್ನೂ ಒಪ್ಪಿಕೊಳ್ಳಲು ರತ್ನ ಒಳಗೊಂಡ ಅತಿ ನೋವಿನ ಪ್ರಕ್ರಿಯೆ ಅವಳಿಗೆ ಸಹಾಯವನ್ನೇ ಮಾಡಿತ್ತು. ಈ ಪರಿಸರದಲ್ಲಿ ಬದುಕಲು ತನಗೊಂದು ಜಾಗವನ್ನು ತಾನೇ ಸೃಷ್ಟಿಸಿಕೊಳ್ಳಬೇಕು. ಇಲ್ಲದೇ ಹೋದಲ್ಲಿ ಸುತ್ತಲಿನವರ ನಡವಳಿಕೆಯಡಿಯಲ್ಲಿ ತಾನು ಅದ್ರಗೊಂಡು ಹೋಗಿಬಿಡುತ್ತೇನೆ ಎನ್ನುವಂತಹ ಆಲೋಚನೆಗಳು (ಅಭಿವ್ಯಕ್ತಿಯ ಸ್ಪಷ್ಟತೆ ನನ್ನದು) ರತ್ನಾಳನ್ನು ಹೆಚ್ಚು-ಹೆಚ್ಚು ಪ್ರಜ್ಞಾವಂತಳನ್ನಾಗಿಸ ತೊಡಗಿತು. ಹಾಗಾದರೆ ತಾನೇನಾದರೂ ಒಂದು ಕೆಲಸಹಿಡಿಯಬೇಕು. ಅಣ್ಣನಲ್ಲಿ ಈ ಆಲೋಚನೆ ಹಂಚಿಕೊಂಡಾಗ “ನಮ್ಮ ಕುಟುಂಬದ ಹೆಣ್ಣು ಕೆಲಸ ಹಿಡಿಯುವುದೆಂದರೇನು ಎನ್ನುವ “ಪ್ರತಿಷ್ಠೆಯ ಪ್ರತಿಕ್ರಿಯೆ ತಕ್ಷಣಕ್ಕೆ ಬಂದದ್ದು. ಅಣ್ಣ-ತಂದೆಯರನ್ನು ಇದಕ್ಕೆ ಒಪ್ಪಿಸುವಲ್ಲಿ ಕೊನೆಗೂ ರತ್ನ ಸಫಲಳಾಗಿದ್ದಳು. “ಹೊರಗಡೆ ಎಲ್ಲೂ ಹೋಗುವುದು ಬೇಡ, ಹಳ್ಳಿಯಲ್ಲೇ ಏನಾದರೂ ಮಾಡು” ಎನ್ನುವ ಒಪ್ಪಿಗೆ ಸಿಕ್ಕಿತ್ತು.

“ಈಗ ಟೇಲರಿಂಗ್ ಮಾಡುತ್ತೇನೆ ಮೇಡಂ ಇದರಿಂದ ಕೊನೆವರೆಗೂ ನನ್ನ ಜೀವನ ನಾನು ಮಾಡಲು ಸಾಧ್ಯ ಅಂತ ಅನ್ನಿಸಿದೆ” ಅಂದಳು ರತ್ನ. ಅಲ್ಲದೆ ಹಳ್ಳಿಯ ಎಲ್ಲಾ ಕುಟುಂಬಗಳೂ ಒಂದಿಲ್ಲಾ ಒಂದು ಸಂದರ್ಭದಲ್ಲಿ ರತ್ನಾಳ ಬಳಿ ಬಟ್ಟೆ ಕೊಡುವುದರಿಂದ ಅವಳೊಬ್ಬ ಕೆಲಸಗಾರಳು ಎಂದು ಕಂಗಣಿಸಲು ಸಾಧ್ಯವಾಗಿದೆ. ಜತೆಗೆ ನಮಗೆ ಬೇಕಾದಂತಹ ರೀತಿಯಲ್ಲಿ ಅಚ್ಚುಕಟ್ಟಾಗಿ ಬಟ್ಟೆ ಹೊಲೆಯುವುದರಿಂದ ರತ್ನಾ ಅಚ್ಚುಮೆಚ್ಚಿನ ಟೇಲರ್ ಕೂಡ. ರತ್ನಾಳಲ್ಲಿ ಇನ್ನೂ ಕಿರು ಆಸೆ ಉಳಿದುಕೊಂಡಿದೆ. ತನ್ನ ಸಂಪಾದನೆಯ ಹಣವನ್ನು ಕೂಡಿಟ್ಟು ತಾನೆ ಬೆಂಗಳೂರಿನಲ್ಲಿ ಒಳ್ಳೇ ಸ್ಪೆಷಲಿಷ್ಟರನ್ನು ಕಂಡು ತನ್ನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲೂಬಹುದು ಎಂದು ನಂಬಿದ್ದಾಳೆ. ತನಗೇನೂ ಮಹಾ ವಯಸ್ಸಾಗಿಲ್ಲ-ಇಂದಿಲ್ಲ ನಾಳೆ ತಾನು ಹೆಣ್ಣಾಗಬಹುದು ಎನ್ನುವುದರ ಜತೆಗೆ ಹಾಗಾಗದಿದ್ದಲ್ಲಿ ನನ್ನ ಸಂಗಾತಿಯಾಗಿ ಈ ಟೇಲರಿಂಗ್ ಮಿಷಿನ್ ಇದೆಯಲ್ಲಾ ಎನ್ನುತ್ತಾಳೆ ರತ್ನ. ಇವೆರಡು ಸ್ಪಷ್ಟ ಅಂಶಗಳ ನಡುವೆ ಇನ್ನೂ ತೂಗುಯ್ಯಾಲೆಯಲ್ಲೇ ರತ್ನಾಳ ಮನಸ್ಥಿತಿ ಇದ್ದರೂ ಅವಳು ಸಮಸ್ಥಿತಿ ತಲುಪುವ ಬಗ್ಗೆ ಅವಳ ಈವರೆಗಿನ ಬದುಕು ಯಾವ ಅನುಮಾನವನ್ನೂ ಹುಟ್ಟಿಸುವುದಿಲ್ಲ.

ಅಸಭ್ಯ ವರ್ತನೆಗೆ ತಕ್ಕ ಉತ್ತರ

ದಿನಾಂಕ 24. 7. 90 ರಂದು, ನಗರದ ನ್ಯಾಶನಲ್ ಕಾಲೇಜ್ ಸರ್ಕಲ್‌ನಲ್ಲಿ, ಬಿ, ಟಿ. ಎಸ್ ಚಾಲಕ-ನಿರ್ವಾಹಕರಿಂದ ಅವಮಾನಿಸಲ್ಪಟ್ಟ ಶ್ರೀಮತಿ ಇಂದಿರಾ ಅವರು ಉತ್ತರವಾಗಿ ರಸ್ತೆಯಲ್ಲೇ ಸತ್ಯಾಗ್ರಹ ಕುಳಿತರು. ಪರಿಣಾಮವಾಗಿ ಬಹಳ ಹೊತ್ತು ವಾಹನಸಂಚಾರ ಸ್ಥಗಿತಗೊಂಡಿತು. ಆ ದಿನಸ ಇಂದಿರ ಅವರು ಮೊಪೆಡ್‌ನಲ್ಲಿ ಹೋಗುತ್ತಿರುವಾಗ, ಬಿ. ಟಿ. ಎಸ್. ಬಸ್ಸಿನ ಚಾಲಕ ಅಜಾಗರೂಕತೆಯಿಂದ ಬಸ್ಸನ್ನು ಮೊಪೆಡ್‌ಗೆ ಹೊಡೆಸಿದ, ಇಂದಿರಾ ಕೆಳಕ್ಕೆ ಬಿದ್ದರು ಸಾವರಿಸಿಕೊಂಡು ಎದ್ದು ಹಾಗೇಕೆ ಮಾಡಿದಿರೆಂದು ಕೇಳಿದ್ದಕ್ಕೆ ಚಾಲಕ ನಿರ್ವಾಹಕರಿಬ್ಬರೂ ಆಕೆಯನ್ನು ಅಸಭ್ಯವಾಗಿ ಬಯ್ದರು ಅವರ ವರ್ತನೆಯನ್ನು ಪ್ರತಿಭಟಿಸಿ ಆಕೆ ಅಲ್ಲಿಯೇ ಸತ್ಯಾಗ್ರಹ ಕುಳಿತರು. ಅಲ್ಲಿದ್ದ ಸಾರ್ವಜನಿಕರು, ನ್ಯಾಶನಲ್ ಕಾಲೇಜಿನ ವಿದ್ಯಾರ್ಥಿಗಳು ಆಕೆಯನ್ನು ಬೆಂಬಲಿಸಿದರು.

ಪರಿಸ್ಥಿತಿ ವಿಪರೀತಕ್ಕೆ ಹೋಗುವುದೆಂದು ತಿಳಿದು ಚಾಲಕ-ನಿರ್ವಾಹಕರು ಜಾಗ ಬಿಟ್ಟು ಓಡಿದರು. ಸಂಬಂಧಪಟ್ಟ ಬಿ. ಟಿ. ಎಸ್. ನ ಹಿರಿಯ ಅಧಿಕಾರಿಗಳು ಸುದ್ದಿ ತಿಳಿದು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದರು. ಹಾಗೂ ಚಾಲಕ-ನಿರ್ವಾಹಕರ ವಿರುದ್ಧ ಸರಿಯಾದ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಕ್ರಮ ತೆಗೆದುಕೊಂಡರೊ, ಬಿಟ್ಟರೊ ಎಂಬುದು ಬೇರೆ ವಿಷಯ ಆದರೆ ತಮ್ಮ ಅಸಭ್ಯ ವರ್ತನೆಗೆ ಮಹಿಳೆಯರು ಸುಮ್ಮನಿರುವುದಿಲ್ಲವೆಂದು ಬಿ. ಟಿ. ಎಸ್ ಚಾಲಕ ನಿರ್ವಾಹಕರು ತಿಳಿದುಕೊಂಡರೆ ಒಳಿತು. ಇಲ್ಲಿ ಒಬ್ಬ ಇಂದಿರ ಸಾವಿರಾರು ಇಂದಿರೆಯರ ಪ್ರತಿಭಟನೆಯ ದನಿಗೆ ಸ್ಫೂರ್ತಿಯಾಗ ಬಲ್ಲಳು.

ಹೆಣ್ಣು ಶಿಶುವಿನ ವರ್ಷದದ ನೆನಪಿಗಾಗಿ ......

ವಿದ್ಯಾರ್ಜನೆಯಲ್ಲಿನ ತಾರತಮ್ಯ

ಗೀತಾ ಜಿ. ಎಸ್.

"ಅಮ್ಮಾ, ಒಂದ್ ಸ್ವಲ್ಪ ಹೊತ್ತು ಆಡ್ಕೊಂಡ್ ಬರ್ತೀನಮ್ಮ, ಆಮೇಲೆ ಕೆಲ್ಸ ಮಾಡ್ತೀನಿ"—ಸುಗುಣ ತಾಯಿಯ ಬಳಿ ಗೋಗರೆಯುತ್ತಿದ್ದಳು. "ಅದೆಲ್ಲ ಆಗೋದಿಲ್ಲ, ಮನೆ ಕಸ ಗುಡಿಸಿ, ನೀರು ತರ್ಬೇಕು ಈಗ್ಲೇ. ಆಮೇಲೆ ಅನ್ನೋ ಪುರಾಣಾನೇ ಇಲ್ಲ, ಕೆಲ್ಸ ಮೊದ್ಲು, ಆಟ ಆಮೇಲೆ" ಎಂದರು ಆಕೆಯ ತಾಯಿ. "ಮತ್ತೆ, ಅಣ್ಣ ಆಡ್ತಾನೆ. ನಾನ್ಯಾಕೆ ಹೋಗಬಾರ್ದು?" ಮಗಳ ಪ್ರಶ್ನೆಗೆ ತಾಯಿ, "ಇದೇನಾ ನಿಂಗೆ ಸ್ಕೂಲಲ್ಲಿ ಹೇಳಿಕೊಟ್ಟದ್ದು, ಗಂಡು ಹುಡುಗ್ರು ಗಂಡುಹುಡುಗರಾಗೇ ಬೆಳೀಬೇಕು. ಹೆಣ್ಮಕ್ಕಳು ಹೆಣ್ಮಕ್ಕಳಂತೇ ಇರಬೇಕು. ಅಂತ ಮೇಷ್ಟ್ರು ಹೇಳ್ಳಿಲ್ವ" ಎಂದು ಗದರಿದರು. ತಾಯಿಯ ಜೋರು ದನಿಗೆ ಮಗಳು ಮಂಕಾಗಿ ಒಳಗೆ ನಡೆದು ಕೆಲಸಕ್ಕೆ ಪ್ರಾರಂಭಿಸಿದಳು.

ಮಕ್ಕಳೆಲ್ಲ ಒಟ್ಟಿಗೆ ಆಟ ಆಡುತ್ತಿದ್ದರು. ಬಾಲಕ ಬಾಲಕಿಯರೆಲ್ಲರು ಸೇರಿ- "ಮನೆ ಆಟ" ಕ್ಕೆ ಪ್ರಾರಂಭಿಸಿದರು. ಅವರೆಲ್ಲರಿಗಿಂತ ಹಿರಿಯಳು ಆ ಗುಂಪಿನಲ್ಲಿ ಮಂಗಳ. ಆದರೂ ಆಕೆ "ಅಮ್ಮ" ಆಗಿ ಅಡಿಗೆಗೆ ಪ್ರಾರಂಭಿಸಬೇಕಿತ್ತು. ಅವಳಿಗಿಂತ ಕಿರಿಯ ನಾಗಿದ್ದ ನಾಗೇಶ "ಮನೆಯ ಯಜಮಾನ" ಅವನ ಓರಗೆಯ ಹುಡುಗರು ಹೊರಗೆ, ತೋಟಕ್ಕೆ, ಗದ್ದೆಗೆ ಕೆಲಸಕ್ಕೆ ಹೋಗಿ ಸಂಪಾದಿಸಿಕೊಂಡು ಬರಬೇಕು. ಉಳಿದ ಹುಡುಗಿಯರು ಮನೆಯೊಳಗೇ ಬೇರೆ ಬೇರೆ ಕೆಲಸ ಮಾಡಿಕೊಂಡಿರಬೇಕು ಎಂದು ತೀರ್ಮಾನವಾಯಿತು. ಅವರೆಲ್ಲರಿಗಿಂತ ಕಿರಿಯಳಾಗಿದ್ದ ಪರಿಮಳೆಗ ಇದು ಸರಿಕಾಣದೆ "ನಾನೂ ಹೊರಗೆ ದುಡಿಯುವುದಕ್ಕೆ ಹೋಗುತ್ತೇನೆ" ಎಂದು ತಕರಾರು ಮಾಡಿದಳು. ಯಾರೂ ಅದಕ್ಕೆ ಪ್ರೋತ್ಸಾಹವೀಯದೆ ಪ್ರತಿರೋಧ ಸೂಚಿಸಿದರು. ಅವಳೂ ಹಠಮಾರಿ, ಪಟ್ಟು ಬಿಡಲಿಲ್ಲ. ಕಡೆಗೆ "ಯಜಮಾನ" ನಾಗೇಶ, "ಏಯ್ ನಾನ್ ಹೇಳಿದ್ಮೇಲೆ ಆಗೋಯ್ತು. ನಂ ಪಾಠಗಳಲ್ಲೇ ಬಂದಿದೆ. ಹೆಣ್ಮಕ್ಕಳು ಮನೇಲಿ ಅಮ್ಮಂದ್ರಿಗೆ ಸಹಾಯ ಮಾಡೋದು, ಗಂಡ್ಮಕ್ಕಳು ತಂದೆಗೆ ಸಹಾಯ ಮಾಡ್ತಾರೆ ಗೊತ್ತಾ?" ಎಂದಿದ್ದ. ಕಡೆಗೂ ಪರಿಮಳ ಆ ಗುಂಪಿನಿಂದ ಬೇರೆಯಾಗಲೇಬೇಕಾಯ್ತು.

ನಿಜ, ಪಠ್ಯಪುಸ್ತಕಗಳಲ್ಲಿ ಈ ಅಂಶಗಳಿರುತ್ತವೆ. ಶಾಲೆಯಲ್ಲೂ ಮಕ್ಕಳಿಗೆ ಗುರುಗಳು ಇದೇ ಭಾವನೆಗಳಿಗೇ ಪುಷ್ಟಿಕೊಡುತ್ತಾರೆ. ಮನೆಯಲ್ಲೂ ಇದೇ ವಾತಾವರಣ, — ಹೆಣ್ಮಕ್ಕಳು ಮನೆಯೊಳಗಿನ ಕೆಲಸವನ್ನೇ ಮಾಡಬೇಕು. ಆಟಗಳಿಂದ ದೂರವಿರಬೇಕು, ಪ್ರಶ್ನೆಗಳನ್ನು ಹಾಕುವ, "ಉದ್ಧಟತನ" ತೋರಕೂಡದು........ ಇತ್ಯಾದಿ. ಪ್ರಶ್ನೆಗಳನ್ನು ಕೇಳುವುದು, ಕುತೂಹಲ, ಸಾಹಸ — ಇವೆಲ್ಲ ಬಾಲಕರಿಗೇ ಸಂಬಂಧಪಟ್ಟಂತೆ ವರ್ಣಿತವಾದ ಪಾಠಗಳಿರುತ್ತವೆ. ಮೂರನೇ ತರಗತಿಯ ಪಾಠವೊಂದರಲ್ಲಿ ರವಿಯು ಶಾಲೆಯಿಂದ ಬಂದವ ತಂದೆಗೆ ಸಹಾಯ ಮಾಡಲು ತೋಟಕ್ಕೆ ಹೋಗುತ್ತಾನೆ. ಗಿಡಗಳ ಆರೈಕೆ ಅವನಿಗೆ ಬಹುಪ್ರಿಯವಾದಂತಹ ಕೆಲಸ. ಮತ್ತೊಂದು ಪಾಠದಲ್ಲಿ ನಿರ್ಮಲೆ ತಾಯಿಗೆ ಹೆಗಲು ನೀಡಲು ಹಟ್ಟಿಯ ಸೆಗಣಿ ತೆಗೆದು ಸ್ವಚ್ಛಗೊಳಿಸುತ್ತಾಳೆ. ಹಸುವನ್ನು ಹೊರಗೆ ಕರೆದೊಯ್ದು ಕಟ್ಟುವುದು ನಂತರ ತೋಟದಲ್ಲಿ ದುಡಿಯುತ್ತಿರುವ ತಂದೆಗೆ, ಅಣ್ಣನಿಗೆ ಬುತ್ತಿ ಒಯ್ಯುತ್ತಾಳೆ. ಹೆಂಗಸರು–ಅಬಲೆಯರು, ದುರ್ಬಲರು ಎಂಬ ಭಾವನೆಗೆ ಪ್ರೋತ್ಸಾಹವೀಯುವ ಸಂದರ್ಭಗಳಿವು. ಮನೆಯ ಹೊರಗಿನ ಕೆಲಸ ಕಷ್ಟಕರವಾದದ್ದು ಎಂಬುದೊಂದಾದರೆ, ಹೆಣ್ಮಕ್ಕಳಿಗೆ ಹೊರಗಿನ ಪ್ರಪಂಚದ ಅನುಭವದ ಅಗತ್ಯವಿಲ್ಲ, ನಾಲ್ಕು ಗೋಡೆಗಳ ನಡುವೆಯೇ ಅವಳ ಬಾಳನ್ನು ರೂಪಿಸಬೇಕು ಎಂಬುದು ಮತ್ತೊಂದು.

ಐದನೇ ತರಗತಿಯಲ್ಲಿ "ಜೋಕಾಲಿ ಹಬ್ಬ" ದ ಪರಿಚಯ ಮಾಡಿಕೊಡುವಾಗ, "ನವರಾತ್ರಿ" ಬಗ್ಗ

ಉಲ್ಲೇಖಿಸುವಾಗಲೂ ಹಾಗೆಯೇ "ಗಂಡಸರು ಜೋಕಾಲಿಯನ್ನು ತಾವೇ ತೂಗಿಕೊಳ್ಳುತ್ತಾರೆ, ಅವರವರಲ್ಲಿಯೇ ಸ್ಪರ್ಧೆಗಳೂ ಇರುತ್ತವೆ. ಹೆಂಗಸರು ಜೊತೆಯ ಹೆಂಗಸರ ಕೈಲಿ ಜೀಕಿಸಿಕೊಳ್ಳುವರು" ಎಂದು ಹೇಳಲ್ಪಟ್ಟಿದೆ. ಗಂಡಸರು ಶಕ್ತಿ ಪ್ರದರ್ಶನಗಳ ಸಾಹಸದಲ್ಲಿ ತೊಡಗಿದ್ದರೆ, ಹೆಣ್ಣುಮಕ್ಕಳು ಸಿಂಗಾರ ಮಾಡಿಕೊಂಡು, ಓರಗೆಯವರ ಮನೆಗಳಿಗೆ ಭೇಟಿ ನೀಡುವುದು, ದೇವರ ಬಳಿ ಕುಳಿತು ಹಾಡುವುದು ಅವರ ಸಂಪ್ರದಾಯ. ನವರಾತ್ರಿಗಳಲ್ಲಿ ಹೆಂಗಸರು ಉಪವಾಸ, ಫಲಹಾರ ಎಂದು ವ್ರತಗಳನ್ನು ಕೈಗೊಂಡು ದೇವರ ಜಗುಲಿಗೆ ತಲೆಕೊಟ್ಟು ಮಲಗುವರು. ಗಾಯನ, ನಿಬಂಧ, ಸಣ್ಣ ಏಕಾಂಕ, ಪಂದ್ಯಾಟಗಳು ಬಾಲಕರದಾಗಿದ್ದರೆ, ಬಾಲಕಿಯರು ಕಸೂತಿ — ರಂಗವಲ್ಲಿಗಳಲ್ಲಿ ಭಾಗವಹಿಸುತ್ತಾರೆ ಎಂದಿದೆ. ಹುಡುಗಿಯರಿಗೆ ತಾವು ಕೂಡುವ ಜೋಕಾಲಿಯನ್ನು ತೂಗಲೂ ಜನ ಬೇಕು ಎಂಬುದು ಸರಿಯಲ್ಲ. ಏಕೆಂದರೆ ನಮ್ಮ ಎಷ್ಟೋ ಹೆಣ್ಣುಮಕ್ಕಳು ಯಾರ ಸಹಾಯವೂ ಇಲ್ಲದೆ ಉಯ್ಯಾಲೆ ತೂಗಿಕೊಳ್ಳಬಲ್ಲರು, ಅಷ್ಟೇ ಅಲ್ಲದೆ ಎಷ್ಟು ಮೇಲಕ್ಕೆ ಉಯ್ಯಾಲೆಯಲ್ಲಿ ಮೇಲೆ ಹೋಗುವರೆಂಬ ಸ್ಪರ್ಧೆ ಹೆಣ್ಮಕ್ಕಳಲ್ಲೂ ನಡೆಯುವುದುಂಟು. ಆದರೆ ಇದು ಕೇವಲ ಬಾಲಕಿಯರೇ ಇದ್ದಾಗಷ್ಟೇ. ಹಿರಿಯರಿದ್ದರೆ ಇದಕ್ಕೆ ಅವಕಾಶ ನೀಡರು. ಬದಲಿಗೆ ಅಪ್ಪಿ ತಪ್ಪಿ ಅವರ ದೃಷ್ಟಿಗೇಸಾದರೂ ಬಿದ್ದರೆ, "ನೀನೇನು ಗಂಡುಬೀರೀನಾ?" ಎಂಬ ಮೂದಲಿಕೆಯೊಂದಿಗೆ ಆ ಆಟ ಹುಡುಗಿಯರಿಗೆ ಸಲ್ಲ ಎಂಬ ಅಭಪ್ರಾಯಕ್ಕೆ ಹಚ್ಚು ಒತ್ತುಕೊಡಲಾಗುತ್ತದೆ.

ಇನ್ನು ಸಿಂಗಾರದ ವಿಷಯ-ಸ್ನೇಹ, ಸೌಹಾರ್ದದ ವೃದ್ಧಿಗೆ ಬಂಧು-ಮಿತ್ರರನ್ನು ಭೇಟಿಯಾಗಬೇಕು ನಿಜ. ಆದರೆ ಮುಂದೆ ಹೆಂಗಸಾಗಿ ಬೆಳೆದು ಸಮಾಜದ ಪ್ರಮುಖ ಅಂಗವೆನಿಸಿಕೊಳ್ಳುವ ಬಾಲಕಿಗೆ ಸಿಂಗರಿಸಿಕೊಳ್ಳುವುದೇ ಪ್ರಮುಖ, ಎಲ್ಲರ ಮನೆಗೆ ಹೋಗಿ, ಹಾಡುವುದಷ್ಟೇ ಅವಳ ಕರ್ತವ್ಯ ಎಂಬ ಭಾವ ಮೂಡಿ, ಅವಳು ತನ್ನ ವ್ಯಕ್ತಿತ್ವ ವಿಕಾಸಕ್ಕೆ ಹೆಚ್ಚು ಗಮನ ಕೊಡದಂತೆ ಮಾಡುತ್ತದೆ. ಕಸೂತಿ, ರಂಗವಲ್ಲಿಗಳು, ಹಾಡು, ಲಲಿತಕಲೆಗಳ ಪರಿಧಿಗೇ ಬರುವುದು ಹೌದಾದರೂ ಅವು, ಬಾಲಕಿಯರಿಗೇ, ಹೆಂಗಸರಿಗೇ ಮೀಸಲು ಎಂದು ಹಣೆಪಟ್ಟಿ ಹಚ್ಚುವುದು ತಪ್ಪು.

ಹಾಗೇ ನಿಬಂಧ, ಆಟದ ಪಂದ್ಯಗಳು, ಏಕಾಂಕಗಳು ಹುಡುಗಿಯರಿಗೆ ನಿಷೇದ್ಧ ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತವೆ. ಹೆಣ್ಣುಮಕ್ಕಳನ್ನು ಆದಷ್ಟೂ ಅವುಗಳಿಂದ ದೂರವಿರಿಸಲು ಪ್ರಯತ್ನಿಸುತ್ತವೆ.

೭ನೇ ತರಗತಿಯಲ್ಲಿ ಬೇಟೆಗಾರನ ಮಗನ ಸಾಹಸದ ಕಥೆಯಿದೆ. ಕುಮಂತ್ರಿಯ ಪ್ರೇರಣೆಯಿಂದ ರಾಜ ಹೇಳುವ ಅಸಾಧ್ಯದ ಕಾರ್ಯಗಳನ್ನೆಲ್ಲ ಸಾಧಿಸುವ ಧೀರ. "ಗರತಿ ಗಂಗವ್ವ"ನ ಪಾಠದಲ್ಲಿ ಮಗನೇ ತನ್ನ ತಾಯಿ ಗಂಗೆ ಪಾಲಾಗಲು ಪ್ರೇರಿಸುತ್ತಾನೆ. ತನ್ನ ಅವ್ವ "ಗರತಿ" ಎಂದು ತಿಳಿದಿದ್ದ ಮಗ, ತನ್ನ ತಾಯಿಗೆ ಡಂಗುರದ ವಿಷಯ ಹೇಳಿ ಗಂಗೆಯ ಮಡಿಲಿಗೆ ಹೋಗಿ, ಊರನ್ನು ಕಾಪಾಡಲು ಉತ್ತೇಜಿಸುತ್ತಾನೆ (ಆ ಮಗ ಆಟವಾಡುವ ಬಾಲಕ). ಗಂಗವ್ವನೂ ಕೂಡ ಮಾವ, ಅತ್ತೆ, ನಾದಿನಿ, ಓರಗಿತ್ತಿಯರಿಗೆ ಹೇಳಿ ನಮಸ್ಕರಿಸಿ ಬೀಳ್ಕೊಂಡು ಗಂಡನ ಕಾಲಿಗೆ ಬಿದ್ದು, "ಮತ್ತೊಂದು ಮದುವೆಯಾಗಿ ಸುಖಪಡು" ಎಂದು ಹಾರೈಸಿ, ಭಾಗೀರಥಿಯ ತಡಿಗೆ ನಡೆಯುತ್ತಾಳೆ. ಅವಳನ್ನು ಯಾರೂ ತಡೆಯುವುದಿಲ್ಲ. ಅವಳ ಆತ್ಮಾರ್ಪಣೆಯ "ಘನಕಾರ್ಯ" ಹಳ್ಳಿಯ ಜನರೆಲ್ಲರ ಜೀವನ ನೇರ್ಪಾಗಲು ಸಹಾಯಕವಾಗುತ್ತದೆ.

"ಗರತಿ ಗಂಗವ್ವ" ಒಂದು ಜಾನಪದ ಕಥೆ. ಇಂಥವೇ ಹಲವಾರು ಕಥೆಗಳಿವೆ. ಈ ಎಲ್ಲ ಕಥೆಗಳ ನೀತಿ, ಅಂತರಾರ್ಥಗಳು ಒಂದೇ. ಹೆಣ್ಣಿನ ಸತಿ ಧರ್ಮ ಮತ್ತು ಸಮರ್ಪಣಾ ಮನೋಭಾವಗಳ ಭಾವನಾತ್ಮಕ ಬೆಸುಗೆಯೇ ಪ್ರಮುಖವೆನಿಸಿಬಿಟ್ಟವೆ. ಹೆಣ್ಣು ತನಗಾಗಿ ಬದುಕುವುದಕ್ಕಿಂತಲೂ ಪರರಿಗಾಗಿ ಬದುಕಬೇಕು ಎಂಬ ಅಂಶಕ್ಕೇ ಒತ್ತುಕೊಡುತ್ತವೆ. ತಾನು ಸತ್ತರೂ ಗಂಡ ಸುಖವಾಗಿರಬೇಕಂಬ ಔದಾರ್ಯವೇ ಆಕೆಯ ಸಹಜತೆ ಹಾಗೂ ಪಾತಿವ್ರತ್ಯವೆಂಬುದಕ್ಕೇ ಹೆಚ್ಚಿನ ಪ್ರಾಧಾನ್ಯತೆ. (ಪತ್ನಿಯ ಅಗಲಿಕೆ ಸಹಿಸದ ಪತಿ, ಸತಿಯನ್ನೇ ಅನುಸರಿಸಿ-"ಕೆರೆಗೆ ಹಾರ"ವಾದ ಉದಾಹರಣೆಗಳು ತೀರ ವಿರಳ. ಆದರೆ ನಾಡಿಗಾಗಿ ಹೋರಾಡಿ ಮಡಿದ ಯೋಧನ ಮಡದಿಗೆ "ಸತಿ" ಆಗುವುದೇ ಶ್ರೇಷ್ಠತೆ.) ಈ ಭಾವನೆಗಳೇ ಹೆಂಗಸರು ಪುಕ್ಕಲು ಸ್ವಭಾವದೊಂದಿಗೆ, ಟೊಳ್ಳುತನ

ಬೆಳೆಸಿಕೊಳ್ಳಲು ಪ್ರೇರೇಪಿಸುತ್ತವೆ. ಒಂದೇ ವಯೋಮಾನದ ಒಂದೇ ತರಗತಿಯ ಸಹಪಾಠಿಗಳು ಓದುವ ಪಾಠಗಳು ಎಷ್ಟು ಭೇದಭಾವ ಒಡ್ಡುತ್ತವೆ? ಗಂಡು ಮಕ್ಕಳಲ್ಲಿ ತನ್ನ ಬಗ್ಗೆ ಭರವಸೆ, ಸ್ಥೈರ್ಯಗಳನ್ನು ಮೂಡಿಸುವ ವಿದ್ಯೆ ಹೆಣ್ಣುಮಕ್ಕಳಲ್ಲಿ ಅದಕ್ಕೆ ತದ್ವಿರುದ್ಧ ಭಾವನೆಗೆ ಪ್ರಚೋದಿಸುತ್ತವೆ.



o o o o o

ಮಹಿಳಾ ಸಮಾವೇಶ – 1

ಮಹಿಳಾ ಶೋಷಣೆಯನ್ನು ತಡೆಗಟ್ಟುವಲ್ಲಿ ಮಹಿಳಾ ಚಳುವಳಿಗಳು ಈಗೀಗ ಹೆಚ್ಚು ಅರ್ಥಪೂರ್ಣವಾಗುತ್ತಿವೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಚಳುವಳಿಗಳಿಗೆ ಹೊಸ ಆಯಾಮ ಬರುತ್ತಿರುವಂತೆ ಕಳೆದ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಎರಡು ಮಹಿಳಾ ಸಮಾವೇಶಗಳು ಹೆಚ್ಚು ಮಹತ್ವ ಪೂರ್ಣ ವಾದವುಗಳು.

ಜುಲಾಯಿ ತಿಂಗಳ 14 ನೇ ತಾರೀಕಿನಂದು ದಾಮಿನಿ ಮಹಿಳಾ ವೇದಿಕೆ ಮತ್ತು ಕಾನೂನು ನೆರವು ಮಂಡಳಿಯ ಸಂಯುಕ್ತ ಆಶ್ರಯದಲ್ಲಿ ನಡೆದ ಒಂದು ವಿಚಾರ ಸಂಕಿರಣ "ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಅದನ್ನು ತಡೆಗಟ್ಟುವ ವಿಧಾನಗಳು" ಇದರ ಕುರಿತಾಗಿ ನಡೆದದ್ದು. ಈ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಮಾನ್ಯ ಸಚಿವ ವೀರಪ್ಪ ಮೊಯಿಲಿಯವರು ಮಹಿಳೆಯರ ಮೇಲಿನ ದೌರ್ಜನ್ಯಗಳ ತನಿಖೆ ನಡೆಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಯೋಚನೆ ಸರಕಾರದ ಪರಿಶೀಲನೆಯಲ್ಲಿದೆ. ಎಂದು ತಿಳಿಸಿದರು. ವರದಕ್ಷಿಣೆ ಸಾವಿಗೆ ಕಾರಣರಾದ ವ್ಯಕ್ತಿಗಳಿಗೆ ಮರಣ ದಂಡನೆ ಅಗತ್ಯ ಎಂದು ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಎಸ್. ಮೋಹನರವರು ತಿಳಿಸಿದರೆ ಅನಂತರ ಮಾತನಾಡಿದ ಶ್ರೀಮತಿ ಹೇಮಲತಾ ಮಹಿಷಿಯವರು ಪ್ರತಿಯೊಂದು ವಿವಾಹವನ್ನು ನೊಂದಾಯಿಸುವುದರಿಂದ ಪತ್ನಿಗೆ ಹೆಚ್ಚು ರಕ್ಷಣೆ ದೊರೆಯುತ್ತದೆ ಎಂಬುದಾಗಿ ಹೇಳಿದರು. ಕಾನೂನು ನೆರವು ಮಂಡಳಿಯ ಕಾರ್ಯದರ್ಶಿಯವರಾದ ಶ್ರೀ ಕೆ. ವಿ. ವಾಸುದೇವ ಮೂರ್ತಿಯವರು ಸಂಚಾಲಕರಾಗಿದ್ದ ಈ ಸಂಕಿರಣದಲ್ಲಿ ಮೇಲೆ ತಿಳಿಸಿದ ವಿಷಯಗಳ ಮೇಲೆ ಸರ್ವಾನುಮತದಿಂದ ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ದಿನಾಂಕ 28. 7. 90 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಮಹಿಳಾ ಸಾಂಸ್ಕೃತಿಕ ಸಂಘಟನೆಯವರು ನಡೆಯಿಸಿದ ವಿರೋಧಿ ಸಮಾವೇಶ ಮಹಿಳಾ ಚಳುವಳಿಯ ದಿಸೆಯತ್ತ ಇನ್ನೊಂದು ಮಹತ್ವಪೂರ್ಣ ಘಟನೆ.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಲೇಖಕಿ ಡಾ॥ ಅನುಪಮಾ ನಿರಂಜನರವರು ಮಹಿಳೆಯರ ಕುರಿತಾಗಿ ಸಮಾಜದ ಧೋರಣೆ ಬದಲಾಗಬೇಕೆಂದು ಹೇಳಿದ ರಲ್ಲದೇ ಮಹಿಳೆಯರಲ್ಲಿ ವಿದ್ಯಾಭ್ಯಾಸದ ವ್ಯಾಪಕ ಪ್ರಚಾರ ಹಾಗೂ ಆರ್ಥಿಕ ಸ್ವಾತಂತ್ರ್ಯ ವರದಕ್ಷಿಣೆಯ ಕಿರುಕುಳವನ್ನು ತಡೆಗಟ್ಟುವಲ್ಲಿ ಸಹಾಕವಾಗುವುದೆಂದು ತಿಳಿಸಿದರು. ಸಮಾವೇಶದ ಮುಖ್ಯ ಅತಿಥಿಗಳಾದ ಶ್ರೀ ವಿ. ಆರ್. ಕೃಷ್ಣ ಅಯ್ಯರ್‌ರವರು ಅಸ್ತಿತ್ವದಲ್ಲಿರುವ ಕಾನೂನುಗಳು ಮಹಿಳೆಯರಿಗೆ ನೆರವು ನೀಡುವಲ್ಲಿ ವಿಫಲವಾಗಿದೆಯೆಂದು ತಿಳಿಸಿ ವರದಕ್ಷಿಣೆಯ ಪಿಡುಗನ್ನು ತಡೆಯಲು ಕ್ರಾಂತಿಕಾರೀ ಹೋರಾಟವೇ ಆಗತ್ಯ ಎಂದು ತಿಳಿಸಿ ಹೋರಾಟಕ್ಕೆ ಕರೆಗೊಟ್ಟರು. ಮಾಜಿ ನ್ಯಾಯಾಧೀಶರಾದ ಶ್ರೀ ಚಿನ್ನಪ್ಪ ರೆಡ್ಡಿಯವರು ಮಹಿಳೆಯರ ಸಮಸ್ಯೆ ಇಡೀ ದೇಶದ ಸಮಸ್ಯೆಯಾಗಿದೆ ಎಂದು ವಿಶ್ಲೇಷಿಸಿದರು. ಎಂ. ಎಸ್. ಎಸ್. ನ ಅಖಿಲ ಭಾರತ ರಾಷ್ಟ್ರೀಯ ಮಟ್ಟದ ಸಂಚಾಲಕರಾಗಿದ್ದ ಶ್ರೀಮತಿ ಛಾಯ ಮುಖರ್ಜಿಯವರು ಉಳಿಗಮಾನ್ಯ ಪದ್ಧತಿಯ ರೂಪವಾದ ವರದಕ್ಷಿಣೆಯ ಕ್ರೂರ ಪಿಡುಗಿನ ವಿರುದ್ಧ ಎಲ್ಲ ಸ್ತರಗಳ ಜನರೂ ಒಗ್ಗಟ್ಟಿನಿಂದ ಹೋರಾಡಬೇಕೆಂದು ಕರೆ ನೀಡಿದರು. ಎಂ. ಎಸ್. ಎಸ್. ನ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಡಾ॥ ಸುಧಾ ಕಾಮತರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶದಲ್ಲಿ ವರದಕ್ಷಿಣೆ ಮತ್ತು ಅಶ್ಲೀಲತೆಯ ವಿರುದ್ಧ ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಶಾರದಾ ಭಟ್

ಅಥ್ಯ ಪಥ್ಯ

ಗುರು–ಶಿಷ್ಯ ಪರಂಪರೆಗೆ ಈಗ ಧಕ್ಕೆ ಬಂದಿದೆ. ಕಲಿಸುವುದು ತೀರಾ ಅವೈಯುಕ್ತಿಕವಾಗುತ್ತ ನಡೆದಿದೆ. ಕಂಪ್ಯೂಟರ್ ಅಥವಾ ತಾಂತ್ರಿಕ ಶಿಕ್ಷಣ ಕೊಡುವಾಗ ಹೀಗಾದರೆ ಪರವಾಗಿಲ್ಲ. ಆದರೆ ಲಲಿತ ಕಲೆಗಳನ್ನು ಕಲಿಸುವಾಗ ಗುರು ಶಿಷ್ಯರ ಮ್ಯಧೆ ಭಾವನಾತ್ಮಕ ಸಂಬಂಧ ಬಹಳ ಅಗತ್ಯ.

ಯಾಮಿನಿ ಕೃಷ್ಣಮೂರ್ತಿ
(ನೃತ್ಯ ಕಲಾವಿದೆ)

ಜ್ಯೂಜ ಉಷಾ ಉತ್ತರಾಧಿಕಾರಿ.

ಅಶ್ವಿನಿ ನಾಚಪ್ಪ.
(ಸಂಡೆ ಮೇಲ್‌ನಲ್ಲಿ)

ಬೀಜಿಂಗ್ ಕ್ರೀಡಾಕೂಟದ ನಂತರ ನಾನು ನಿವೃತ್ತಳಾಗುವೆ. ನಿವೃತ್ತಳಾಗುವುದಕ್ಕಿಂತ ಮುಂಚೆ ದೊಡ್ಡ ವಿಜಯ ಸಾಧಿಸುವೆ– ನನ್ನನ್ನು ನಂಬಿ.

ಪಿ. ಟಿ. ಉಷಾ.

ನಗರದ ಮಹಿಳೆ ಬದಲಾಗುತ್ತಿರುವ ವೇಗದಲ್ಲಿ ಪುರುಷರು ಬದಲಾಗದೆ, ಆಕೆಯೊಂದಿಗೆ ಹೊಂದಿಕೊಳ್ಳುತ್ತಿಲ್ಲ.

ಅಪರ್ಣಾಸೇನ್
(ಸಿನಿಮಾ ನಟಿ)

ನಾಗರೀಕತೆಯ ಮೊದಲ ದಿನಗಳಿಂದ ನಾವು ಮಹಿಳೆಯರನ್ನು ದೇವತೆಗಳೆಂದು ಗೌರವಿಸುತ್ತಾ ಸುಡುತ್ತಿದ್ದೇವೆ. ವಧುದಹನ ಪ್ರಕರಣಗಳು ಸೀತೆಯ ಕಾಲದಷ್ಟೇ ಹಳೆಯದು. ನೆಪಮಾತ್ರ ಬದಲಾಗುತ್ತಿದೆ. ಪಾತಿವ್ರತ್ಯದಿಂದ– ಸತಿ ನಂತರ ವರದಕ್ಷಿಣೆ.

ಸುನಿಲ್‌ದತ್
(ಸಿನಿಮನಟ)

ಪ್ರತಿಯೊಂದು ವರದಕ್ಷಿಣೆ ಸಾವಿನ ಹಿಂದೆ, ಚಿತ್ರಹಿಂಸೆಯ ಹಿಂದೆ ಒಬ್ಬ ಷಂಡ ಗಂಡನಿರುತ್ತಾನೆ. ಇಂಥವರು ನಾಚಿ ತಲೆ ತಗ್ಗಿಸುವಂತೆ ಮಾಡಬೇಕು.

ಪಿ. ಉಪೇಂದ್ರ
(ವಾರ್ತಾ ಸಚಿವ)

ನಾನು ಹೆಚ್ಚು ಜನಪ್ರಿಯಳಾದಾಗ ಬಹಳಷ್ಟು ಜನ ನನ್ನನ್ನು ಮದುವೆಯಾಗಲು ಬಂದರು. ಮೊದಲು ನಾನು ಕಪ್ಪು ಹಾಗೂ ಕುರೂಪಿಯೆಂದು ತಿಳಿದಿದ್ದರು. ಕಪ್ಪು ಹುಡುಗಿ ತಾಯಿ ತಂದೆಯರಿಗೆ ಹೊರೆ. ನಾನು ನನ್ನ ತಂದೆ ತಾಯಿಯರಿಗೆ ಹೊರೆಯಾಗಿದ್ದೆ.

ತೀಜನ್‌ಬಾಯಿ,

ವಿಚ್ಛೇದನ ಪಡೆದ ಹೆಂಗಸರು ಕೇವಲ ಅನುಕಂಪ ಮತ್ತು ಸಹಾನುಭೂತಿಗೆ ಮಾತ್ರ ಅರ್ಹವಾದ ವ್ಯಕ್ತಿಗಳಲ್ಲ ಎಂಬುದನ್ನು ನಾನು ಸಾಧಿಸಿ ತೋರಿಸಬೇಕಾಗಿದೆ.

ದೀಪ್ತಿನವಲ್

ನಾವು ಭಾರತದ ಮಧ್ಯಯುಗದಿಂದ ಬಹಳ ದೂರವೇನೂ ಬಂದಿಲ್ಲ. ಹೆಣ್ಣು ಮಕ್ಕಳನ್ನು ಸುಡುವುದು ಮಧ್ಯಯುಗದ ಕೃತ್ಯವಲ್ಲದೆ ಇನ್ನೇನು?

ಗಿರೀಶ್ ಕಾರ್ನಾಡ್,
(ರಂಗಭೂಮಿ, ಚಲನಚಿತ್ರ ನಟ ಹಾಗೂ
ನಿರ್ದೇಶಕ

ಮಹಿಳಾ ಉದ್ಯಮಿಗಳು ಹಪ್ಪಳ ಸಂಡಿಗೆಗಳ ಸೀಮಿತ ವಲಯ ಬಿಟ್ಟು ಯಂತ್ರೋಪಕರಣಗಳ ತಯಾರಿಕೆಯಂತಹ ಕ್ಷೇತ್ರಕ್ಕೂ ಕಾಲಿಟ್ಟಿರುವುದು ಸಂತಸದ ವಿಷಯ.

ಶಿವಪ್ರಸಾದ್
(ರಾಜ್ಯ ಸಣ್ಣ ಕೈಗಾರಿಕಾ ಸಂಸ್ಥೆಗಳ ನಿರ್ದೇಶಕ)

ಪರ್ವ

ಲೇ. : ಎಸ್. ಎಲ್ ಭೈರಪ್ಪ
ಪ್ರ. : ಸಾಹಿತ್ಯ ಭಂಡಾರ

ನವ ವಧು ದ್ರುಪದ ರಾಜಕುಮಾರಿ ಮದುವೆಯಾದ ಆರನೆಯ ದಿನದಿಂದಲೇ ಈ ಹೆಣಗಾಟಕ್ಕೆ ತನ್ನನ್ನು ತಾನು ಸಿಕ್ಕಿಸಿಕೊಂಡು ಸಾಗಿದ್ದಾಳೆ. ಪಾಂಡವ ಪಂಚರ ಒಗ್ಗಟ್ಟು ಮುರಿಯದಂತೆ ಕಾಪಾಡಿ ಒಂದು ಮುಷ್ಟಿಯಲ್ಲಿ ಹಿಡಿದಿಟ್ಟಿದ್ದಾಳೆ. ಅದು ತಾನಾಗಿಯೇ ಕವಲುದಾರಿ ಹಿಡಿದು ಹೊರಟರೆ ನಾನೇನು ಮಾಡಬೇಕು ನನ್ನ ಬವಣೆಯು ನಿರರ್ಥಕವಾಯಿತೆಂಬ ಅರಿವಿನಿಂದ ದುಃಖಿಸುವುದನ್ನೂ ಬಿಟ್ಟು? ಹೊರಗೆ ಗಾಳಿ ಇಲ್ಲ. ಲೋಹಕಾರನ ಚಮ್ಮಟಿಗೆಯ ದೂರದ ಸದ್ದು ಈ ಬಿಸಿಲಲ್ಲೂ. ಇಪ್ಪತ್ತೈದಿರಬಹುದು ಅವಳ ವಯಸ್ಸು. ಎಷ್ಟನೆಯದೊ ಒಂದಾದ ಮೇಲೆ ಒಂದರಂತೆ ಐದು ಮಕ್ಕಳು, ಎರಡು ತಿಂಗಳ ಬಾಣಂತಿತನ. ಮತ್ತೆ ರಾತ್ರಿಗೊಬ್ಬರಂತೆ ಹಸಿದ ಹುಲಿಗಳೊಡನೆ ಸಂಸಾರ, ಋತುಸ್ರಾವ ಕಾಣಿಸಲು ಅವಕಾಶವೇ ಇಲ್ಲದಂತೆ ಬಸಿರು-ಮಗು-ಬಾಣಂತಿತನ ಮತ್ತೆ ಸಂಸಾರ ಅತ್ತೆಗೆ ಹಿಗ್ಗು. ಒಂದಾದ ಮೇಲೆ ಒಂದು ಗಂಡಾಗುತ್ತಿದೆ, ಖಾಂಡವವನವು ಕೃಷಿಯ ಭೂಮಿಯಾಗುತ್ತಿದೆ. ಪಾಂಡವಪ್ರಸ್ಥವು ಆರ್ಯಾವರ್ತದಲ್ಲೇ ಇಲ್ಲದ ಹೊಸ ಸುಂದರ ನಗರವಾಗುತ್ತಿದೆ. ಇಂದ್ರಪ್ರಸ್ಥವೆಂಬ ಹೊಸ ಹೆಸರನ್ನು ಹೊತ್ತು ನಿಂತಿದೆ. ಹದಿನೆಂಟರ ಪ್ರಾಯದಲ್ಲಿದ್ದ ಹೆಣ್ತನದ ಉತ್ಸಾಹ ಇಪ್ಪತ್ತನಾಲ್ಕರ ಹೊತ್ತಿಗೆ ಇಳಿದು, ಸೋತ ಹಸುರಾಗಿ ಹೋದೆನಲ್ಲ, ಐದು ಜನ ದೃಢಕಾಯ ಗಂಡಂದಿರು. ಪ್ರತಿಯೊಬ್ಬನಿಗೂ ಐದು ದಿನದ ಹಸಿವನ್ನು ಒಂದು ರಾತ್ರಿಯಲ್ಲಿ ತುಂಬಿಕೊಳ್ಳುವ ಮೈಬಾಕತನ. ಅವರ ಹಸಿವನ್ನು ತುಂಬಿಸಿ ಜೊತೆಗೆ ಮಕ್ಕಳುಗಳನ್ನೂ ಹೆತ್ತು ಸೋತ ನಾನು ಒಬ್ಬ ಹೆಂಗಸಿಗೆ ಐವರು ಗಂಡಂದಿರ ಶಕ್ತಿಯುಂಟೆಂದು ಅತ್ತೆ ಹೇಳಿದ್ದುದು ಸುಳ್ಳೆಂದು ಅರ್ಥವಾಯಿತು. ಋತುಸ್ರಾವವಿಲ್ಲದೆ, ಬಸಿರು ಬಾಣಂತನವಿಲ್ಲದೆ ಮೊಲೆಹಾಲಿನ ರೂಪದಲ್ಲಿ ಮಗುವಿಗೆ ಶಕ್ತಿಯನ್ನು ಹರಿಸದ ತಿಂಗಳಿಗೆ ಮೂವತ್ತು ದಿನವೂ ಸಿದ್ಧನಾಗಿರುವ ಒಬ್ಬ ಗಂಡಸಿಗೇ ಹೆಂಗಸು ಸಮನಲ್ಲದಿರುವಾಗ ಐವರಿಗೆ ಹೇಗೆ ಸಮನಾದಾಳು? ಅತ್ತೆ ನನ್ನ ಕೈಲಿ ಸುಳ್ಳು ಹೇಳಿದಳು. ತಿಳಿವಳಿಕೆ ಇಲ್ಲದ ಹದಿನೆಂಟು ವರ್ಷದ ತರುಣಿಯಲ್ಲಿ ಉತ್ಸಾಹವನ್ನುಕ್ಕಿಸಿದಳು, ತನ್ನ ಮಕ್ಕಳ ಒಗ್ಗಟ್ಟು, ಅಭ್ಯುದಯವೊಂದೇ ಅವಳಿಗೆ ಬೇಕಾಗಿತ್ತು! ಹೆಂಗಸಿನ ಆಶೆಯು ಐವರು ಗಂಡಸಿನ ಶಕ್ತಿಗೆ ಸಮನೆಂಬುದು ಅಖಂಡವಾಗಿ ದಾಂಪತ್ಯ ಸುಖ ಕಾಣದೆ ಪ್ರಾಯವನ್ನು ಕಳೆದ ಅವಳ ಭ್ರಮೆಯೋ? ನಾನು ಸೋತ ಹಸುವಾಗಿ, ಜಜ್ಜಿ ರಸತೆಗೆದ ಕಬ್ಬಿನ ಸಿಪ್ಪೆಯಾಗಿ ಅವಳನ್ನೇ ಕೇಳಿದ ಮೇಲಲ್ಲವೇ ಅವಳು ಹೊಸ ಕ್ರಮವನ್ನು ನಿರೂಪಿಸಿ ಮಕ್ಕಳಿಗೂ ಹೇಳಿ ಜಾರಿಗೆ ತಂದದ್ದು. ದಿನಕ್ಕೊಬ್ಬನ ಸರದಿ ಬೇಡ. ಒಬ್ಬೊಬ್ಬರಿಗೂ ನಾಲ್ಕು ಮಕ್ಕಳ ಬ್ರಹ್ಮಚರ್ಯ. ಒಂದು ವರ್ಷದ ದಾಂಪತ್ಯ ಎಂದರೆ ಒಬ್ಬ ಹೆಂಗಸು ಒಬ್ಬ ಗಂಡಸಿಗೆ ಸಮನಾದಳು. ನನ್ನ ಕಾಯ ಉಳಿಯಿತು. ಆ ಮೂಲಕ ಜೀವವೂ ಉಳಿಯಿತು. ತಮ್ಮ ಸರದಿ ಇಲ್ಲದಾಗ ಯಾರೂ ಹೆಂಡತಿಯನ್ನು ಸಮೀಪಿಸಕೂಡದು. ನಾನೂ ಸರದಿ ಇಲ್ಲದ ಯಾರನ್ನೂ ಸೇರಿಸಿಕೊಳ್ಳಕೂಡದು, ನಿಷ್ಠುರ ನಿಷ್ಪಕ್ಷಪಾತಿಯಾಗಿರಬೇಕು ನಾನು. "ಮಗಳೇ ಈ ಕ್ರಮದಲ್ಲಿ ಕೂಡ ಭೇದವಾಯಿತೆಂದು ಯಾರಿಗೂ ಸಿಟ್ಟು ಬರದಂತೆ ನೀನು ಸಮಾನತೆಯನ್ನಾಚರಿಸಬೇಕು. ಇದು ನಿನ್ನ ವ್ರತ"

ವರದಕ್ಷಿಣೆ ಸಾವು

ಕಳೆದ ಮೂರು ವರ್ಷಗಳಲ್ಲಿ ಮತ್ತು ೧೯೯೦ರ ಮೇ ತಿಂಗಳ ಅಂತ್ಯದವರೆಗೆ ಕರ್ನಾಟಕದಲ್ಲಿ ಸಂಭವಿಸಿದ ವರದಕ್ಷಿಣೆ ಸಾವುಗಳ ಪೈಕಿ ಬೆಂಗಳೂರು ನಗರದಲ್ಲಿ ಅತೀ ಹೆಚ್ಚಿನ ವರದಕ್ಷಿಣೆ ಸಾವುಗಳು ಸಂಭವಿಸಿದೆ,

೧೯೮೭, ೮೮, ೮೯ ಹಾಗೂ ೧೯೯೦ ನೇ ವರ್ಷದ ಮೇ ಅಂತ್ಯದವರೆಗೆ ನಗರದಲ್ಲಿ ಕ್ರಮವಾಗಿ ೩೩, ೩೧, ೪೬, ಮತ್ತು ೨೪ ವರದಕ್ಷಿಣೆ ಸಾವುಗಳು ಸಂಭವಿಸಿದೆ.

ಕೊಡಗು ಜಿಲ್ಲೆ ವರದಕ್ಷಿಣೆ ಸಾವಿನಂತಹ ದುಷ್ಕೃತ್ಯಗಳಿಂದ ಮುಕ್ತವಾದಂತೆ ತೋರುತ್ತದೆ. ೧೯೮೯ ಮತ್ತು ೮೭ ರಲ್ಲಿ ಜಿಲ್ಲೆಯಲ್ಲಿ ವರದಕ್ಷಿಣೆ ಸಾವಿನ ಯಾವ ಮೊಕದ್ದಮೆಯೂ ಇರಲಿಲ್ಲ. ೧೯೮೮ ರಲ್ಲ ಕೇವಲ ಒಂದು ಮೊಕದ್ದಮೆ ಹಾಗೂ ೧೯೯೦ರ ಮೇ ತಿಂಗಳವರೆಗೆ ಒಂದು ಮೊಕದ್ದಮೆ ಮಾತ್ರ ದಾಖಲಾಗಿದೆ.

ಇತರ ಜಿಲ್ಲೆಗಳಿಗೆ ಹೋಲಿಸಿದರೆ ಅಕ್ಷರಸ್ಥರ ಸಂಖ್ಯೆ ಹೆಚ್ಚಿರುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರ್ನಾಟಕದಲ್ಲಿನ ಕಾಫೀ ಬೆಳೆಯುವ ಜಿಲ್ಲೆ ಎನಿಸಿರುವ ಚಿಕ್ಕಮಗಳೂರು ಜಿಲ್ಲೆಯಲ್ಲೂ ಕೂಡ ವರದಕ್ಷಿಣೆ ಸಾವುಗಳು ವಿರಳವೆನಿಸಿದೆ. ೧೯೮೭, ೮೮, ೮೯ ಮತ್ತು ೯೦ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರಮವಾಗಿ ೨, ೩ ೧ ಮತ್ತು ೧ ಮೊಕದ್ದಮೆಗಳು ದಾಖಲಾಗಿದ್ದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ೧, ೧, ೨ ಮತ್ತು ೨ ಮೊಕದ್ದಮೆಗಳು ದಾಖಲಾಗಿರುತ್ತವೆ.

ಕಳೆದ ಮೂರು ವರ್ಷಗಳಲ್ಲಿ ಮತ್ತು ೧೯೯೦ರ ಮೇ ಅಂತ್ಯದರೆಗೆ ಸಂಭವಿಸಿರುವ ವರದಕ್ಷಿಣೆ ಸಾವಿನ ಮೊಕದ್ದಮೆಗಳ ಒಟ್ಟು ಸಂಖ್ಯೆ ೫೬. ಮೊಕದ್ದಮೆಗಳ ಸಂಖ್ಯೆಯು ಪ್ರತಿ ವರ್ಷವೂ ಹೆಚ್ಚುತ್ತಲಿದೆ. ೧೯೮೭ ರಲ್ಲಿ ೧೦೬ ಇದ್ದ ಮೊಕದ್ದಮೆಗಳ ಸಂಖ್ಯೆ ೧೯೮೮ ರಲ್ಲಿ ೧೮೨ ಕ್ಕೆ ೧೯೮೯ ರಲ್ಲಿ ೧೯೦ ಕ್ಕೆ ಏರಿತು. ಅಲ್ಲದೆ ೧೯೯೦ ರ ಮೇ ಅಂತ್ಯದಲ್ಲೇ ಈ ಸಂಖ್ಯೆ ೭೮ ನ್ನು ತಲುಪಿದೆ.

ವರದಕ್ಷಿಣೆ ಸಾವಿಗೆ ಸಂಬಂಧಿಸಿದಂತೆ ೧೬೬೦ ವ್ಯಕ್ತಿಗಳನ್ನು ಬಂಧಿಸಲಾಗಿದೆ. ಬಂಧಿತರಾದವರಲ್ಲಿ ೬೭ ಮಂದಿ ಸರ್ಕಾರಿ ನೌಕರರು. ಕೇವಲ ೮ ಮಂದಿಯನ್ನು ಮಾತ್ರ ೧೯೮೭ ರಲ್ಲಿ ವರದಕ್ಷಿಣೆ ಕಾನೂನು ಪ್ರಕಾರ ಅಪರಾಧಿಗಳೆಂದು ನಿರ್ಣಯಿಸಲಾಗಿದೆ.

ರಾಷ್ಟ್ರೀಯ ಮಹಿಳಾ ಆಯೋಗ

ರಾಷ್ಟ್ರೀಯ ಮಹಿಳಾ ಆಯೋಗ ಮಸದದೆಯು ಆಗಸ್ಟ್ ತಿಂಗಳ ಕೊನೆಯಿಂದ ಕಾರ್ಯರೂಪಕ್ಕೆ ಬಂದಿದೆ. ಪ್ರಧಾನಿ ಶ್ರೀ ವಿ. ಪಿ. ಸಿಂಗ್ ಪಾರ್ಲಿಮೆಂಟಿನಲ್ಲಿ ಆಯೋಗದ ಬಗ್ಗೆಗಿನ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಾ, "ಮಹಿಳೆಯರ ಪಾಲಿಗೆ ಸಮಾನತೆ ಹಕ್ಕು ನಿಜವಾದ ಅರ್ಥದಲ್ಲಿ ಸಿಗುವಂತೆ ಸಂವಿಧಾನಾತ್ಮಕವಾಗಿ ಭರವಸೆ ನೀಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಈ ದಿಸೆಯಲ್ಲಿ ಆಯೋಗದ ರಚನೆಯು ಪ್ರಥಮ ಹೆಜ್ಜೆ. ಉದ್ದೇಶಿತ ರಾಷ್ಟ್ರೀಯ ಮಹಿಳಾ ಆಯೋಗವು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಆಯೋಗಕ್ಕೆ ಸಮನಾದ ಅಧಿಕಾರವನ್ನೇ ಹೊಂದಿರುತ್ತದೆ" ಎಂದು ತಿಳಿಸಿದರು.

ಈ ಆಯೋಗವು ಮಹಿಳಾ ಹಕ್ಕುಗಳ ಬಗ್ಗೆ ಅಧ್ಯಯನ ನಡೆಸಿ ಅವುಗಳ ರಕ್ಷಣೆಯ ಬಗ್ಗೆ ಚಿಂತನೆ ನಡೆಸುವ ಉದ್ದೇಶವನ್ನಿಟ್ಟುಕೊಂಡಿದೆ. ಏಳು ಸದಸ್ಯರಿರುವ ಈ ಆಯೋಗದಲ್ಲಿ ಒಬ್ಬರು ಪರಿಶಿಷ್ಟ ಜಾತಿ ಮತ್ತು ವರ್ಗದ ಪ್ರತಿನಿಧಿಯಾಗಿರುತ್ತಾರೆ. ಈ ಆಯೋಗದ ಅಧ್ಯಕ್ಷರ ಅವಧಿ ಮೂರು ವರ್ಷಗಳು.

ಸುದ್ದಿ ಸಂಕಲನ

ಸ್ತ್ರೀಯರ ಸಂಖ್ಯೆ

ಕೇರಳದಲ್ಲಿ ಮಾತ್ರ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಸಾವಿರದ ಸರಾಸರಿಯಲ್ಲಿ ಸ್ವಲ್ಪ ಜಾಸ್ತಿ (1032) ಇದೆ. ಕರ್ನಾಟಕ, ಒರಿಸ್ಸಾ, ಜಮ್ಮು-ಕಾಶ್ಮೀರ ಹಾಗು ಹಿಮಾಚಲ ಪ್ರದೇಶಗಳಲ್ಲಿ ಮಹಿಳೆಯರ ಸಂಖ್ಯೆ ಸರಾಸರಿ 950ರಷ್ಟು ಇದೆ. ಉಳಿದಂತೆ ಎಲ್ಲಾ ರಾಜ್ಯಗಳಲ್ಲಿ ಪುರುಷರ ಸಂಖ್ಯೆಯೇ ಶೇ. 10ಕ್ಕಿಂತಲೂ ಹೆಚ್ಚು ಇದೆ. ಗಂಡು ಶಿಶುಗಳಿಗಿಂತಲೂ ಜೈವಿಕವಾಗಿ ಹೆಚ್ಚು ಬಲಯುತವಾಗಿದ್ದಾಗಲೂ ಪ್ರತಿವರ್ಷ 3 ಲಕ್ಷಕ್ಕಿಂತಲೂ ಹೆಚ್ಚು ಹೆಣ್ಣು ಶಿಶುಗಳು ಸಾಯುತ್ತಿವೆ.

ಪಾಕಿಸ್ತಾನದ ಮೊದಲ ಮಹಿಳಾ ಪೈಲಟ್

ಮಲಿಹಾ ಸಮಿಹಾ ಅವರು ಪಾಕಿಸ್ತಾನದ ನಿತ್ಯ ಹಾರಾಟದ ವಿಮಾನಕ್ಕೆ ವಾಣಿಜ್ಯ ಪೈಲಟ್ ಆಗಿ ಆಯ್ಕೆಯಾಗಿರುವ ಮೊದಲ ಮಹಿಳೆ. ಅಲ್ಲಿನ ಅಂತರರಾಷ್ಟ್ರೀಯ ವಿಮಾನ ಯಾನದ 2 ಎಂಜಿನ್ ಯುಕ್ತ ಎಫ್.27ಕ್ಕೆ ಅವರು ಸಹಚಾಲಕಿಯಾಗಿದ್ದರು.

ಇದೇ ಸಮಯದಲ್ಲಿ ಪಾಕಿಸ್ತಾನದ ವಿಮಾನ ಚಾಲಕಿಯರ ಅಸೋಸಿಯೇಶನ್‌ವರು ಮಹಿಳಾ ಪೈಲಟ್‌ಗಳ ಮೇಲಿನ ಪಕ್ಷಪಾತದ ಬಗ್ಗೆ ಅಲ್ಲಿ ವಿಮಾನ ಸಂಚಾರ ಸಂಸ್ಥೆಯನ್ನು ಆಪಾದಿಸಿದ್ದಾರೆ. ಅಸೋಸಿಯೇಶನ್‌ನ ಶಹನಾಜ್‌ರವರು ಪೈಲಟ್‌ಗಳ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ. 5ರಷ್ಟು ಮೀಸಲಿಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.

ಭ್ರೂಣಹತ್ಯೆ

ಮುಂಬೈ ನಗರಂವೊದರಲ್ಲಿಯೇ 1984ರಲ್ಲಿ ಭ್ರೂಣಲಿಂಗ ಪರೀಕ್ಷೆ ನಂತರ 40,000 ಹೆಣ್ಣು ಶಿಶುಗಳನ್ನು ಗರ್ಭಪಾತದ ಮೂಲಕ ಕೊಲ್ಲಲಾಯಿತು.

ದೇವದಾಸಿಯರ ಪುನರ್ವಸತಿ

ರಾಜ್ಯದಲ್ಲಿ ಈ ವರ್ಷ(1990-91) 65ಲಕ್ಷ ರೂ. ವೆಚ್ಚದಲ್ಲಿ 1200 ದೇವದಾಸಿಯರ ಪುನರ್ವಸತಿ ಕಾರ್ಯವನ್ನು ಸಮಾಜ ಕಲ್ಯಾಣ ಇಲಾಖೆ ಕೈಗೊಳ್ಳಲಿದೆ. ದೇವದಾಸಿ ಪುನರ್ವಸತಿ ಯೋಜನೆಗೆ ಸರ್ಕಾರ 15ಲಕ್ಷರೂ. ಬಿಡುಗಡೆ ಮಾಡಲಿದ್ದು ಉಳಿದ 40 ಲಕ್ಷ ರೂಪಾಯಿಯನ್ನು ಹಣಕಾಸು ಸಂಸ್ಥೆಗಳಿಂದ ಸಂಗ್ರಹಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಬಿ. ಶಿವಣ್ಣ ವಿಧಾನ ಸಭೆಯಲ್ಲಿ ತಿಳಿಸಿದ್ದಾರೆ. ಅಲ್ಲದೆ ಮೈಸೂರು ಹಾಗೂ ಮಂಗಳೂರಿನಲ್ಲಿ ದುಡಿಯುವ ಮಹಿಳೆಯರಿಗಾಗಿ ವಸತಿ ನಿಲಯ ಸ್ಥಾಪಿಸಲಾಗುವುದು.

ಭೀತಿಯ ನೆರಳಲ್ಲಿ

ಅತ್ಯಾಚಾರ ಹಾಗೂ ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸುರಕ್ಷತೆ ಅರಸುತ್ತಿರುವ ಶೇ. 70ರಷ್ಟು ಉದ್ಯೋಗಸ್ಥ ಮಹಿಳೆಯರಿಗೆ ವಾಷಿಂಗ್‌ಟನ್ ದುಃಸ್ವಪ್ನವಾಗಿ ಪರಿಣಮಿಸುತ್ತಿದೆ.

ಕಳೆದ ವರ್ಷ, 1234 ಮಹಿಳೆಯರು ಇಲ್ಲಿ ಅತ್ಯಾಚಾರಕ್ಕೆ ಗುರಿಯಾದರು. ಅಲ್ಲದೆ, ಇತರ ಸಾವಿರಾರು ಮಹಿಳೆಯರು ಅತ್ಯಾಚಾರ ಯತ್ನ ಸೇರಿದಂತೆ ವಿವಿಧ ಬಗೆಯ ಹಿಂಸಾಚಾರಗಳಿಗೆ ಗುರಿಯಾಗಿದ್ದಾರೆ ಎಂದು 'ವಾಷಿಂಗ್‌ಟನ್ ಪೋಸ್ಟ್' ವರದಿ ಮಾಡಿದೆ.

ಮಹಿಳಾ ನ್ಯಾಯಾಧೀಶರು

ಬಿಹಾರದ ರಾಜಧಾನಿ ಪಟ್ನಾ ಹೈಕೋರ್ಟ್‌ನ ಮೊದಲ ನ್ಯಾಯಾಧೀಶರಾಗಿ ಸರ್ಕಾರದ ವಕೀಲರಾದ ಇಂದುಪ್ರಭಾ ಸಿಂಗ್ ಅವರನ್ನು ರಾಷ್ಟ್ರಪತಿ ಆರ್. ವೆಂಕಟರಾಮನ್ ನೇಮಕ ಮಾಡಿದ್ದಾರೆ.

ಗಗನಕ್ಕೇರುತ್ತಿರುವ ಮುದ್ರಣ ಕಾಗದದ ಬೆಲೆ ಅಂಚೆ ವೆಚ್ಚ ಮುಂತಾದವುಗಳಿಂದಾಗಿ ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾಗಿದೆ. ಮಾನಸಕ್ಕೆ ಆಸಕ್ತಿ ಹಾಗೂ ಪ್ರೋತ್ಸಾಹ ವ್ಯಕ್ತಪಡಿಸಿ ಪತ್ರ ಬರೆಯುವ ಸಹೃದಯರು ಹಾಗೂ ಚಂದಾ ಮುಗಿದಿರುವ ಓದುಗರು ತಕ್ಷಣ ಚಂದಾಹಣ ಕಳಿಸಿದರೆ ಪತ್ರಿಕೆಯನ್ನು ಉಳಿಸಿ ಬೆಳೆಸಲು ನೀರೆರೆದು ಪ್ರೋತ್ಸಾಹಿಸಿದಂತಾಗುತ್ತದೆ. ಓದುಗರೆಲ್ಲರನ್ನು ಉಳಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆಯಾದರೂ ಉಚಿತವಾಗಿ ಒಂದು ಸಂಚಿಕೆಯನ್ನು ಕಳಿಸಲು ಉಂಟಾಗುವ ಖರ್ಚನ್ನು ಭರಿಸುವುದು ಪತ್ರಿಕೆಗೆ ಹೊರೆಯಾಗುತ್ತದೆ. ಪ್ರಿಯ ಓದುಗರು ಸಹಕರಿಸಿ ತಕ್ಷಣ 20 00 ರೂ ಚಂದಾ ಹಣ ಕಳಿಸಿಕೊಡಬೇಕೆಂದು ಕೋರುತ್ತೇವೆ.

ಸಂ. ಮಂ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು — ೫೬೦೦೬೭.

ನಂ ಮ್ಯಾಗ್ (5)ಪಿಆರ್ ಬಿ ಡಿಕ್ಲೇರ್ಡ್: 28 | 8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ,
ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.
ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು
ಗುರುತಿಸುವುದಕ್ಕಾಗಿ
ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.
ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

...NTED MATTER

C. G. MANJULA
9, 3rd Cross,
Markham Road.
Ashoka Nagar.
Bangalore-560025.

ವಿಳಾಸ: "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು—560067